ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 49
೫ ಅಕ್ಟೋಬರ್ ೧೯೫೮
*
ಪುಟ ೧೦ ಬೆಲೆ: ೧೩ ನಯೇ ಪೈಸೆ

ಕೇರಳದ ಬಗ್ಗೆ ಪಕ್ಷಪಾತ ಮಾಡುವುದು ಸರಿಯಲ್ಲ

ಕೇರಳದ ಮುಖ್ಯ ಮಂತ್ರಿ ಇ. ಎಂ. ಎಸ್. ನಂಬೂದ್ರಿಪಾದ್‌ರವರು ಸೆ. ತಾ. 24ರಂದು ಮಂಗಳೂರಿಗೆ ಆಗಮಿಸಿದರು. ನಂಬೂದ್ರಿಪಾದ್‌ರವರು ಮಂಗಳೂರಿಗೆ ಹೊಸಬರಲ್ಲ. ಅವರು ಇಲ್ಲಿನ ಕಾರ್ಮಿಕ ಚಳುವಳಿಯ ಮತ್ತು ಕಮ್ಯೂನಿಸ್ಟ್ ಪಾರ್ಟಿಯ ಆರಂಭ ಕಾಲದಿಂದಲೇ ಅವುಗಳೊಂದಿಗೆ ನಿಕಟ ಸಂಬಂಧವಿಟ್ಟುಕೊಂಡು, ಅವುಗಳಿಗೆ ತುಂಬ ನೆರವಾಗಿದ್ದಾರೆ. ಅವರು ಮುಖ್ಯ ಮಂತ್ರಿಯಾದ ಬಳಿಕ ಮಂಗಳೂರಿಗೆ ಇದೇ ಅವರ ಮೊದಲನೆಯ ಭೇಟಿಯಾಗಿತ್ತು.

ಹಾರ್ದಿಕ ಸ್ವಾಗತ

ತಾ. 24ರಂದು ಮಧ್ಯಾಹ್ನ 3 ಘಂಟೆಗೆ ಬಜಿಪೆ (ಮಂಗಳೂರು) ವಿಮಾನ ನಿಲ್ದಾಣದಲ್ಲಿ ಇ. ಎಂ. ಎಸ್.ರವರು ಬಂದು ಇಳಿದಾಗ ಅವರಿಗೆ ಹಾರ್ದಿಕ ಸ್ವಾಗತ ನೀಡಲಾಯಿತು. ಜಿಲ್ಲಾಧಿಕಾರಿಗಳು, ಕಮ್ಯೂನಿಸ್ಟ್ ಪಾರ್ಟಿಯ ಮತ್ತು ಕಾರ್ಮಿಕ—ರೈತ ಸಂಘಟನೆಗಳ ಪ್ರತಿನಿಧಿಗಳು, ಕೇರಳ ಸಮಾಜದ ಗೆಳೆಯರು, ಇತರ ಮಹನೀಯರನೇಕರು ವಿಮಾನ ನಿಲ್ದಾಣದಲ್ಲಿ ಹಾಜರಿದ್ದರು.

ವಿಮಾನ ನಿಲ್ದಾಣದಿಂದ ಮಂಗಳೂರು ನಗರಕ್ಕೆ 17 ಮೈಲು ದೂರವಿದೆ. ಈ ದಾರಿಯುದ್ದಕ್ಕೂ ಅಲ್ಲಲ್ಲಿ ರೈತರು ತಳಿರು—ತೋರಣಗಳನ್ನು ಕಟ್ಟಿದ್ದರು. ಸಾವಿರಾರು ಮಂದಿ ಗಂಡಸರೂ, ಹೆಂಗಸರೂ, ಮಕ್ಕಳೂ, ಮುದುಕರೂ ಮಾರ್ಗದ ಇಕ್ಕಡೆಗಳಲ್ಲಿ ನಿಂತು ಜಯಘೋಷ ಮಾಡುತ್ತಿದ್ದರು. ಹಾರ ತುರಾಯಿಗಳನ್ನು ಅರ್ಪಿಸುತ್ತಿದ್ದರು.

ಮಂಗಳೂರಿಗೆ ಆಗಾಗ ಗಣ್ಯ ವ್ಯಕ್ತಿಗಳು ಆಗಮಿಸುವುದಿದೆ. ಮೈಸೂರು ಮಂತ್ರಿಗಳೂ ತಿಂಗಳಿಗೆ ನಾಲ್ಕೈದು ಬಾರಿ ಬಂದು ಹೋಗುವುದಿದೆ. ಆದರೆ ಪ್ರಧಾನಿ ನೆಹರೂರವರ ಹೊರತು ಬೇರೆ ಯಾರಿಗೂ ಮಂಗಳೂರು ಜನ ಮನವೊಲಿದು, ಮಮತೆ ಅಭಿಮಾನಗಳಿಂದ, ಇಂಥ ಸ್ವಾಗತ ನೀಡಿದ್ದಿಲ್ಲ. ಇ.ಎಂ.ಎಸ್.ರವರು ಸಾ-



ಮಂಗಳೂರಿನಲ್ಲಿ ಮುಖ್ಯ ಮಂತ್ರಿ ಇ. ಎಂ. ಎಸ್.ರವರ ಘೋಷಣೆ

ರ್ವಜನಿಕ ಸಭೆಯಲ್ಲಿ ಹೇಳಿದಂತೆ, ಈ ಸಂಭ್ರಮದ ಸ್ವಾಗತವು, ಅವರು ಪ್ರತಿನಿಧಿಯಾಗಿರುವ ಚಳುವಳಿಯ ಮತ್ತು ಸರಕಾರದ ಬಗ್ಗೆ ಮಂಗಳೂರಿನ ಜನರಿಗಿರುವ ಪ್ರೀತಿ—ವಿಶ್ವಾಸಗಳ ದ್ಯೋತಕವಾಗಿತ್ತು.

ಮೆಡಿಕಲ್ ಕಾಲೇಜಿನಲ್ಲಿ

ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನಲ್ಲಿ ಕಾಮ್ರೇಡ್ ಇ.ಎಂ.ಎಸ್. ನಂಬೂದ್ರಿಪಾದ್‌ರವರಿಗೆ, ಅಧ್ಯಾಪಕರೂ ವಿದ್ಯಾರ್ಥಿಗಳೂ ಸ್ವಾಗತವನ್ನು ಏರ್ಪಡಿಸಿದ್ದರು. ಕಾಲೇಜಿನ ಪ್ರಿನ್ಸಿಪಾಲ್ ಡಾ॥ ವೆಲಿಯತ್‌ರವರು ಸ್ವಾಗತ ಭಾಷಣ ಮಾಡುತ್ತ, ಈ ಕಾಲೇಜಿನಲ್ಲಿ ಎಲ್ಲ ಪ್ರಾಂತಗಳ ಹಣ, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿದ್ದಾರೆಂದು ತಿಳಿಸಿ, ಕೇರಳದಿಂದ ಸುಮಾರು 150ರಷ್ಟು ವಿದ್ಯಾರ್ಥಿಗಳಿದ್ದಾರೆಂದು ಹೇಳಿ, ಅವರು ಪದವಿ ಪಡೆದು ತಮ್ಮ ಊರಿಗೆ ಹಿಂತಿರುಗಿದಾಗ ಅವರಿಗೆ ಯೋಗ್ಯ ಪ್ರೋತ್ಸಾಹ ದೊರಕಲೆಂದು ಹಾರೈಸಿದರು.

ನಂಬೂದ್ರಿಪಾದ್‌ರವರು ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಪದವೀಧರರನ್ನು ಕೇರಳಕ್ಕೆ ಸ್ವಾಗತಿಸಿದರು. ಡಾಕ್ಟರರ ಅಭಾವವಿರುವ ಕೇರಳದಲ್ಲಿ ಅವರಿಗೆ ಖಂಡಿತ ಪ್ರೋತ್ಸಾಹ ದೊರಕುವುದೆಂದು ಆಶ್ವಾಸನೆಯಿತ್ತರು. ಅದೇ ಸಮಯದಲ್ಲಿ ಕಾಲೇಜುಗಳಿಂದ ಹೊರಬರುವ ಡಾಕ್ಟರ್ ಪದವೀಧರರು ಕೆಲವು ವರ್ಷಗಳ ತನಕ ಹಳ್ಳಿಗಳಲ್ಲಿ ದುಡಿಯಬೇಕೆಂದು, ಕೇಳಿಕೊಂಡರು. ಈ ವಿಜ್ಞಾನ ಯುಗದಲ್ಲಿ, ಪದವಿ ಪಡೆಯುವುದರಿಂದಲೇ ತೃಪ್ತಿಹೊಂದದೆ ವೈದ್ಯಕೀಯ ಶಾಸ್ತ್ರದಲ್ಲಿ ಪರಿಣತರಾಗಲು ಗಮನ ಕೊಡಬೇಕೆಂದು ವಿದ್ಯಾರ್ಥಿಗಳಲ್ಲಿ ವಿನಂತಿ ಮಾಡಿದರು.

ಅನಂತರ ನಂಬೂದ್ರಿಪಾದ್‌ರವರು, ಕೇರಳ ಸಮಾಜದವರು ಏರ್ಪಡಿಸಿದ್ದ ಸ್ವಾಗತ ಸಮಾರಂಭದಲ್ಲಿ ಭಾಗವಹಿಸಿದರು. ಕೇರಳೀಯರು ಎಲ್ಲಿದ್ದರೂ ಅಲ್ಲಲ್ಲಿನ ಜನರೊಂದಿಗೆ ಬೆರೆತು ಬಾಳಬೇಕೆಂದು ಅವರು ಹೇಳಿದರು.

ಬಹಿರಂಗ ಸಭೆಯಲ್ಲಿ

ಸಂಜೆ 6 ಘಂಟೆಗೆ ಕೇಂದ್ರ ಮೈದಾನದಲ್ಲಿ 30 ಸಾವಿರಕ್ಕೂ ಹೆಚ್ಚು ಜನ ಸೇರಿದ್ದರು. ಸಾರ್ವಜನಿಕ ಸಭೆಯಲ್ಲಿ ಇ. ಎಂ. ಎಸ್.ರವರು ಭಾಷಣ ಮಾಡಿದರು. ಕರ್ನಾಟಕ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಕಾಂ॥ ಎನ್. ಎಲ್. ಉಪಾಧ್ಯಾಯರವರು ಅಧ್ಯಕ್ಷತೆ ವಹಿಸಿದ್ದರು. ವಿವಿಧ ಸಂಘ ಸಂಸ್ಥೆಗಳ ಪರವಾಗಿ ಹಾರಗಳನ್ನು ಅರ್ಪಿಸಲಾಯಿತು. ಕಾಂ॥ ಎ. ಶಾಂತಾರಾಂ ಪೈಯವರು ಅತಿಥಿಗಳನ್ನೂ ಸಭಿಕರನ್ನೂ ಸ್ವಾಗತಿಸಿದರು.

"ಕಮ್ಯೂನಿಸ್ಟ್ ಸರಕಾರವು ಕಮ್ಯೂನಿಸ್ಟ್ ಪಾರ್ಟಿಗೆ ವಿಶೇಷ ಅಧಿಕಾರವನ್ನೇನೂ ಕೊಟ್ಟಿಲ್ಲ; ಆದರೆ ಇತರ ಪಕ್ಷಗಳಿಗಿರುವ ಎಲ್ಲ ಅವಕಾಶಗಳು ಕಮ್ಯೂನಿಸ್ಟ್ ಪಾರ್ಟಿಗೂ ಇದೆ. ಕಮ್ಯೂನಿಸ್ಟ್ ಸರಕಾರಕ್ಕೆ ಪ್ರತ್ಯೇಕ ಅನುಕೂಲತೆ ಏನೂ ಬೇಕೆಂದು ನಾವು ಕೇಳುವುದಿಲ್ಲ. ಇತರ ಎಲ್ಲ ಪ್ರಾಂತ ಸರಕಾರಗಳ ಕಡೆಗೆ ಅನುಸರಿಸುವ ನೀತಿಯನ್ನೇ ಕೇರಳ ಸರಕಾರದ ಕಡೆಗೂ ಅನುಸರಿಸಬೇಕೆಂದು ನಾವು ಕೇಳುತ್ತೇವೆ" ಎಂದು ಇ. ಎಂ. ಎಸ್. ಸ್ಪಷ್ಟಪಡಿಸಿದರು.

ಅಧಿಕಾರ ವಿಕೇಂದ್ರೀಕರಣ ಮತ್ತು ಆಡಳಿತೆಯಲ್ಲಿ ಎಲ್ಲ ಪಕ್ಷಗಳು ಮತ್ತು ಸಾಮಾನ್ಯ ಜನರು ಭಾಗವಹಿಸುವುದಕ್ಕೆ ಅವಕಾಶ ಕೊಡುವ ಆಡಳಿತ ಸುಧಾರಣೆಯನ್ನು ಕೇರಳ ಸರಕಾರ ಜ್ಯಾರಿಗೆ ತರಲಿದೆ ಎಂದು ಇ. ಎಂ. ಎಸ್. ವಿವರಿಸಿದರು.

ಕಮ್ಯೂನಿಸ್ಟ್ ಪಾರ್ಟಿ ಅಧಿಕಾರದಲ್ಲಿ ಇರಬೇಕೆಂದು ಜನತೆ ಇಚ್ಛಿಸುವ ತನಕ—ಪಾರ್ಟಿಗೆ ಎಸೆಂಬ್ಲಿಯಲ್ಲಿ ಬಹುಮತ ಇರುವ ತನಕ—ಕಮ್ಯೂನಿಸ್ಟ್ ಸರಕಾರ ಅಧಿಕಾರದಲ್ಲಿರುವುದು. ಎಸೆಂಬ್ಲಿಯಲ್ಲಿ ಬಹುಮತವಿದ್ದರೂ ಜನರ ಬೆಂಬಲ ಕಳೆದುಹೋಗಿದೆಯೆಂದು ಆಪಾದಿಸಿ ತಿರುಗಿ ಚುನಾವಣೆ ಆಗಬೇಕೆಂದು ಕಾಂಗ್ರೆಸ್ ಕೇಳುತ್ತದೆ. ಹಾಗೆಯೇ ಆಂಧ್ರದಲ್ಲೂ ಬಂಗಾಳದಲ್ಲೂ ಚುನಾವಣೆ ನಡೆಯುವುದಾದರೆ ಕೇರಳದಲ್ಲೂ ನಡೆಯಬಹುದು. ಕೇವಲ 2 ಬಹುಮತವಿರುವ ಸರಕಾರಕ್ಕೆ ಆಳುವ ಅಧಿಕಾರವಿಲ್ಲವೆಂದು ಪಟ್ಟಂಥಾನು ಪಿಳ್ಳೆ ಹೇಳುತ್ತಾರೆ. 150 ಸದಸ್ಯರಿರುವ ಎಸೆಂಬ್ಲಿಯೊಳಗೆ ಕೇವಲ 18ಸದಸ್ಯರನ್ನು ಕಟ್ಟಿಕೊಂಡು ಅದೇ ಪಟ್ಟಂಥಾನು ಪಿಳ್ಳೆ ಕೆಲವು ತಿಂಗಳು ಸರಕಾರ ನಡೆಸಿದ್ದರೆಂಬುದು ಅವರಿಗೆ ಈಗ ಮರೆತುಹೋಗಿದೆಯೋ ಏನೋ? ನಮ್ಮನ್ನು ಜನರು ಬಹುಮತದಲ್ಲಿ ಆರಿಸಿದ್ದರೆ ನಾವು ಅಧಿಕಾರದಲ್ಲಿರುವುದಕ್ಕೂ ಇಲ್ಲದಿದ್ದರೆ ಪ್ರತಿಪಕ್ಷದಲ್ಲಿರುವುದಕ್ಕೂ ಎಲ್ಲಿ ಇರಬೇಕೆಂದು ಜನ ಹೇಳುತ್ತಾರೋ ಅಲ್ಲಿ ಇರುವುದಕ್ಕೆ—ಯೋಗ್ಯರು. ಆದರೆ ಕಾಂಗ್ರೆಸ್ ಮತ್ತು ಕೇರಳ ಪಿ.ಎಸ್.ಪಿ. ನಾಯಕರು ಮಂತ್ರಿಗಳಾಗುವುದಕ್ಕೆ ತಾವು ಮಾತ್ರ ಯೋಗ್ಯರೆಂದೂ ಅದು ಅವರ ಜನ್ಮಸಿದ್ಧ ಹಕ್ಕೆಂದೂ ತಿಳಿದುಕೊಂಡಿದ್ದಾರೆ.

ಎಲ್ಲ ಪಕ್ಷ ಪಂಗಡಗಳಲ್ಲೂ ಸಹಕರಿಸಿ ರಾಷ್ಟ್ರ ಪುನರ್ ನಿರ್ಮಾಣವನ್ನು ಯಶಸ್ವಿಗೊಳಿಸೋಣ ಎಂದು ಇ. ಎಂ. ಎಸ್. ವಿನಂತಿ ಮಾಡಿಕೊಂಡರು.

ಕಾಂ॥ ಕೃಷ್ಣಶೆಟ್ಟಿಯವರು ಧನ್ಯವಾದ ಅರ್ಪಿಸಿದರು,

ರಾತ್ರಿ ಕೇರಳ ಸಮಾಜದವರು ಏರ್ಪ

(೯ನೇ ಪುಟ ನೋಡಿ)

ಹಟ್ಟಿ ಚಿನ್ನದ ಗಣಿ ಕಾರ್ಮಿಕ ನಾಯಕರ ಉಪವಾಸ ಮುಷ್ಕರ !

1600 ಮಂದಿ ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಮುಷ್ಕರವು ಕಳೆದ ೨೫ ದಿನಗಳಿಂದ ಮುಂದುವರಿಯುತ್ತಿದೆ. ಸರಕಾರ ಈವರೆಗೆ ಯಾವ ಕ್ರಮವನ್ನೂ ಕೈಗೊಳ್ಳದಿರುವುದು ಶೋಚನೀಯವಾಗಿದೆ.

ಸರಕಾರ ಹಾಗೂ ಸಾರ್ವಜನಿಕರ ಗಮನವನ್ನು ಸೆಳೆಯಲು ಕಾರ್ಮಿಕ ಸಂಘದ ಕಾರ್ಯದರ್ಶಿ ಶ್ರೀ ಪಿ. ನಾರಾಯಣನ್‌ರವರು ಸೆಪ್ಟಂಬರ್ 29ರಿಂದ ಉಪವಾಸ ಮುಷ್ಕರ ಆರಂಭಿಸಿದ್ದಾರೆ. ಉಪವಾಸ ಮುಷ್ಕರ ಆರಂಭವಾಗಿ ನಾಲ್ಕು ದಿನಗಳು ಕಳೆದಿವೆ. ಮುಷ್ಕರವು ಶಾಂತರೀತಿಯಲ್ಲಿ ಮುಂದುವರಿಯುತ್ತಿದೆ. ಸರಕಾರವು ತಡ ಮಾಡದೆ ಪ್ರವೇಶಿಸಿ ವಿವಾದವನ್ನು ಇತ್ಯರ್ಥಗೊಳಿಸಲಿ.

ಸಂಪಾದಕೀಯ...

ಮುಷ್ಕರ ಹೂಡಿರುವ ಹಟ್ಟಿ ಚಿನ್ನದ ಗಣಿ ಕಾರ್ಮಿಕರಿಗೆ ನ್ಯಾಯ ಸಿಗಲಿ

ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಮುಷ್ಕರ ಆರಂಭವಾಗಿ ೨೫ ದಿನಗಳಾದರೂ ಸರಕಾರ ಇನ್ನೂ ಯಾವ ಕ್ರಮವನ್ನು ತೆಗೆದುಕೊಳ್ಳದಿರುವುದು ಶೋಚನೀಯವಾಗಿದೆ. ಸೆಪ್ಟಂಬರ್ ೨೯ ರಿಂದ ಸಂಘದ ಕಾರ್ಯದರ್ಶಿಯವರು ಉಪವಾಸ ಮುಷ್ಕರವನ್ನು ಆರಂಭಿಸಿದ್ದಾರೆ. ಸರಕಾರ ಕೂಡಲೇ ಪ್ರವೇಶಿಸಿ, ಕಾರ್ಮಿಕರ ಬೇಡಿಕೆಗಳ ಇತ್ಯರ್ಥಕ್ಕೆ ಗಮನ ಕೊಡದಿದ್ದಲ್ಲಿ ಪರಿಸ್ಥಿತಿ ಹದಗೆಡುವ ಸಂಭವವಿದೆ,

ಗಣಿ ಮ್ಯಾನೇಜ್‌ಮೆಂಟ್ ಜಾನ್‌ಟೇಲರ್ ಅಂಡ್ ಕಂಪೆನಿಯವರದಾದರೂ ಮುಖ್ಯ ಮಂತ್ರಿ ಜತ್ತಿಯವರು ಆಡಳಿತ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಕಾರ್ಮಿಕ ಸಂಘವು ಕೆಲವು ತಿಂಗಳಿಂದಲೂ ಮುಖ್ಯ ಮಂತ್ರಿಗಳಲ್ಲಿ ಅನೇಕ ಮನವಿಗಳನ್ನೂ ಮಾಡಿಕೊಂಡಿದ್ದರೂ ಅದು ವ್ಯರ್ಥವಾಗಿ ಕೊನೆಯ ಅಸ್ತ್ರವಾಗಿ ಕಾರ್ಮಿಕರು ಮುಷ್ಕರ ಆರಂಭಿಸಿದ್ದಾರೆ.

ಕಾರ್ಮಿಕರ ಸಂಘವು ತುಟ್ಟಿಭತ್ಯದಲ್ಲಿ ಹೆಚ್ಚಳ, ಸರ್ವೀಸ್ ಗ್ರಾಚುಯಿಟಿ. ಸಂಘಕ್ಕೆ ಮಾನ್ಯತೆ, ಬೋನಸ್, ಕೆಲಸದಿಂದ ವಜಾ ಆದವರನ್ನು ಹಿಂತೆಗೆದುಕೊಳ್ಳುವುದು ಈ ಬೇಡಿಕೆಗಳನ್ನು ಮುಂದಿರಿಸಿ ಒಂದು ವರ್ಷವಾಗಿದೆ. ಸಂಧಾನ ಮಾತುಕತೆಗಳೆಲ್ಲ ಮುರಿದು ಬಿದ್ದನಂತರ ಕಳೆದ ಜೂನ್ ತಿಂಗಳಲ್ಲಿ ಮುಷ್ಕರದ ನೋಟೀಸು ಕೊಟ್ಟರೂ, ಇನ್ನೂ ಮೂರು ತಿಂಗಳು ಕಾದು ಬೇಸತ್ತು ಮುಷ್ಕರ ಆರಂಭಿಸಿದ್ದಾರೆ. ಇದು ಕಾರ್ಮಿಕರ ಸಂಘವು ಸಹನೆಯಿಂದ ವರ್ತಿಸಿರುವುದನ್ನು ಸರಕಾರವು ಅನಾದರಣೆ ನೀತಿ ಅನುಸರಿಸಿರುವುದನ್ನು ವ್ಯಕ್ತಗೊಳಿಸುತ್ತದೆ. ಕಂಪೆನಿಯವರ ಹಠಮಾರಿತನ ಮತ್ತು ಸರಕಾರದ ಅನಾದರಣೆ ಇವು ಇಂದಿನ ಪರಿಸ್ಥಿತಿಗೆ ಎಡೆಗೊಟ್ಟಿದೆ.

ಸಂಘದ ಮಾನ್ಯತೆಯ ಪ್ರಶ್ನೆಯಮೇಲೂ ಸಹ ಸರಕಾರವು ತ್ರಿಪಕ್ಷ ಸಮ್ಮೇಳನದ ವಿಧಿನಿಯಮಗಳನ್ನು ಅನುಸರಿಸದೆ ಬಹು ಸಂಖ್ಯಾತ ಕಾರ್ಮಿಕರ ಪ್ರಾತಿನಿಧ್ಯವುಳ್ಳ ಸಂಘಕ್ಕೆ ಮಾನ್ಯತೆ ಕೊಡದೆ, ಮ್ಯಾನೇಜ್‌ಮೆಂಟ್ ಪ್ರೇರಿತ ಇಂಟಕ್ ಸಂಘಕ್ಕೆ ಮಾನ್ಯತೆ ಕೊಡಲಾಗಿದೆ. ಮಾಲಿಕನಾಗಿರುವ ಸರಕಾರ ಈ ನೀತಿ ಅನುಸರಿಸಿದಲ್ಲಿ ಇನ್ನು ಖಾಸಗಿಯವರ ಮಾತೇನು?

ಜತ್ತಿಯವರು ಮೊನ್ನೆ ಪತ್ರಿಕಾ ಸಮ್ಮೇಳನವೊಂದರಲ್ಲಿ ಮುಷ್ಕರದ ಬಗ್ಗೆ ಮಾತನಾಡುತ್ತಾ, ಬೇಡಿಕೆಗಳ ಬಗ್ಗೆ ಚಕಾರವೆತ್ತಲಿಲ್ಲ. ಬದಲು ಅರ್ಧಕ್ಕಿಂತಲೂ ಹೆಚ್ಚುಮಂದಿ ಕೆಲಸಗಾರರು ಕೆಲಸಕ್ಕೆ ಹಿಂತಿರುಗಿದ್ದಾರೆಂದು ಹೇಳಿದ್ದಾರೆ. ಇದು ವಾಸ್ತವಾಂಶಕ್ಕೆ ದೂರವಾಗಿದೆ. ಮುಷ್ಕರದಲ್ಲಿ ಪೂರ್ಣವಾಗಿ ಕೆಲಸಗಾರರು ಭಾಗವಹಿಸಿರುವುದಲ್ಲದೆ, ಶಾಂತಯುತವಾಗಿ ನಡೆಯುತ್ತಿರುವುದೇ ಇದಕ್ಕೆ ಸಾಕ್ಷಿಯಾಗಿದೆ.

ಈ ಅನಾದರಣೆ ಮತ್ತು ಮೊಂಡುತನದ ನೀತಿಯನ್ನು ಕೈಬಿಟ್ಟು ಕೂಡಲೇ ಕ್ರಮ ತೆಗೆದುಕೊಂಡು 1600 ಕಾರ್ಮಿಕರ ನ್ಯಾಯವಾದ ಬೇಡಿಕೆಗಳಿಗೆ ಮನ್ನಣೆ ಕೊಡಲಿ.

ಲಾಕ್‌ಔಟ್ ತೆಗೆಸಲು ಸರಕಾರ ಕ್ರಮ ತೆಗೆದುಕೊಳ್ಳಲಿ

ಬೆಂಗಳೂರಿನ ಎರಡು ಹತ್ತಿ ಗಿರಣಿ ಕಾರ್ಖಾನೆಯನ್ನು ಮಾಲಿಕರು ಲಾಕ್‌ಔಟ್ ಮಾಡಿದ್ದಾರೆ. ಇದರಿಂದಾಗಿ ಸುಮಾರು 1600 ಕಾರ್ಮಿಕರಿಗೆ ನಿರುದ್ಯೋಗ ಸಂಭವಿಸಿದೆ.

ಟಿ. ಆರ್. ಮಿಲ್ ಮಾಲಿಕರಿಗೆ ಸೇರಿರುವ ಚಂದ್ರ ಮಿಲ್ಸ್‌ನಲ್ಲಿ ಸೆಪ್ಟಂಬರ್ 9 ರಿಂದ ಮಾಲೀಕರು ಲಾಕ್‌ಔಟ್ ಮಾಡಿದ್ದಾರೆ. ಕಾರ್ಮಿಕರು ಒಪ್ಪಂದವನ್ನು ಜಾರಿಗೆ ತರಬೇಕೆಂದು ಒತ್ತಾಯಪಡಿಸಿದ್ದರಿಂದ ಮಾಲಿಕರು ಕಾರ್ಖಾನೆ ಮುಚ್ಚಿದ್ದಾರೆ.

ಅದೇ ರೀತಿಯಲ್ಲಿ ಸುಬ್ರಹ್ಮಣ್ಯಪುರದಲ್ಲಿರುವ ಶ್ರೀ ಕೃಷ್ಣ ವೀವಿಂಗ್ ಮಿಲ್ಸ್‌ನಲ್ಲಿ ಸೆಪ್ಟಂಬರ್ 11ರಿಂದ ಲಾಕ್‌ಔಟ್ ನಡೆದಿದೆ. ಶ್ರಮಭಾರ ಹೆಚ್ಚಿಸುವ ಮಾಲಿಕರ ಧೋರಣೆಯನ್ನು ಕಾರ್ಮಿಕರು ಪ್ರತಿಭಟಿಸಿದುದೇ ಇದಕ್ಕೆ ಕಾರಣವಾಗಿದೆ.

ಎರಡು ಕಾರ್ಖಾನೆಗಳೂ ಮುಚ್ಚಲ್ಪಟ್ಟು ಇಪ್ಪತ್ತು ದಿನಗಳಾಗುತ್ತ ಬಂದರೂ ಸರಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಈವರೆಗೆ ಕಾರ್ಖಾನೆ ತೆಗೆಸಲು ನಡೆದ ಸಂಧಾನವೆಲ್ಲವೂ ವಿಫಲವಾಗಿದೆ. ಸರಕಾರವು ಸೂಕ್ತವಾದ ಕ್ರಮ ತೆಗೆದುಕೊಳ್ಳಲು ಕಾನೂನುರೀತ್ಯ ಅವಕಾಶವಿದ್ದರೂ ಸುಮ್ಮನೆ ಕುಳಿತಿದೆ. ಸರಕಾರದ ಈ ಕಾರ್ಮಿಕ ವಿರೋಧೀ ಧೋರಣೆಯಿಂದ 1,600 ಕಾರ್ಮಿಕ ಕುಟುಂಬಗಳು ನಿರುದ್ಯೋಗವನ್ನೆದುರಿಸಬೇಕಾಗಿ ಸರಕಾರವು ಇದೇ ಬಗೆಯ ಅನಾದರಣೆ ನೀತಿ ಅನುಸರಿಸಿದಲ್ಲಿ ಕೈಗಾರಿಕಾ ಶಾಂತಿಯ ಮಾತು ಬರೇಕನಸಾದೀತು.

ವಾರದ ದೇಶ ಸಮೀಕ್ಷೆ

ರೈಲ್ವೆ ಬಜೆಟ್ ಸಮರ್ಪಕವಾಗಿಲ್ಲ

ರೈಲ್ವೆ ಬಜೆಟ್ಟನಲ್ಲಿ ಖರ್ಚಿನ ಬಾಬ್ತುಗಳಲ್ಲಿ ಮಾಡಲಾಗಿರುವ ಅಂದಾಜುಗಳು ಅಸಮರ್ಪಕವಾಗಿವೆ ಎಂದು ಎಸ್ಟಿಮೇಟ್ ಸಮಿತಿಯು ತನ್ನ ವರದಿಯಲ್ಲಿ ತಿಳಿಸಿದೆ. ಇದಕ್ಕೆ ಸರಿಯಾದ ಯೋಜನೆಯಿಲ್ಲದಿರುವುದೇ ಕಾರಣವೆಂದು ವರದಿಯು ತಿಳಿಸಿದೆ.

ಬಜೆಟ್‌ನಲ್ಲಿ ಮೀಸಲಾಗಿರಿಸಿರುವುದಕ್ಕಿಂತ ಅನೇಕ ಸಂದರ್ಭಗಳಲ್ಲಿ ಖರ್ಚು ಬಹಳ ಕಡಿಮೆಯಾಗಿದೆ. ಮೀಸಲಾಗಿರುವ ಹಣವನ್ನು ಪೂರ್ಣವಾಗಿ ಬಳಸಿಲ್ಲ. ಸರಿಯಾದ ಯೋಜನೆ ಇರಿಸಿಕೊಂಡು ಬಜೆಟ್‌ನಲ್ಲಿ ಮೀಸಲಾಗಿರಿಸಿರುವ ಹಣವನ್ನು ವಿನಿಯೋಗಿಸಲು ವ್ಯವಸ್ಥೆಗೊಳಿಸಬೇಕು. ಹಾಗೆ ಮಾಡಿದಲ್ಲಿ ಹೆಚ್ಚಿನ ಪ್ರಗತಿಗೆ ಸಾಧ್ಯವಿದೆ ಎಂದು ವರದಿಯು ತಿಳಿಸಿದೆ.

ರೈಲ್ವೆ ವಿಷಯದಲ್ಲಷ್ಟೇ ಹೀಗಾಗಿಲ್ಲ, ಎಸ್ಟಿಮೇಟ್ ಸಮಿತಿ, ಪಬ್ಲಿಕ್ ಅಕೌಂಟ್ಸ್ ಸಮಿತಿ ಮುಂತಾದ ಸಮಿತಿಗಳು ಇತರ ಕೈಗಾರಿಕೆಗಳ ಬಗ್ಗೆ ಮಾಡಿರುವ ವರದಿಗಳನ್ನು ನೋಡಿದರೆ ಇಂಥ ನಿದರ್ಶನಗಳು ಅನೇಕವಿವೆ. ಕಾಂಗ್ರೆಸ್ ಆಡಳಿತೆಯ ದಕ್ಷತೆಗೆ ಇದು ಸಾಕ್ಷಿಯಾಗಿದೆ.

ಜೀವವಿಮಾ ಕಾರ್ಪೊರೇಷನ್ ತನಿಖಾ ಸಮಿತಿಯ ವರದಿ

ಜೀವವಿಮಾ ಕಾರ್ಪೊರೇಷನ್ ಮುಂಧ್ರ ಷೇರುಗಳನ್ನು ಕೊಂಡು ಸಾರ್ವಜನಿಕರ ಹಣವನ್ನು ಪೋಲುಮಾಡಿದ ಕುಖ್ಯಾತ 'ಮುಂಧ್ರ ಪ್ರಕರಣ'ದ ಸಂಬಂಧದಲ್ಲಿ ಅಧಿಕಾರಿಗಳ ನಡವಳಿಕೆಯನ್ನು ಪರಿಶೀಲಿಸಲು ನೇಮಕವಾಗಿದ್ದ ವಿವಿಯನ್ ಬೋಸ್ ಸಮಿತಿಯು ಸರಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದೆ.

ವರದಿಯನ್ನು ಸರಕಾರ ಅಧಿಕೃತವಾಗಿ ಪ್ರಕಟಗೊಳಿಸದಿದ್ದರೂ ಪತ್ರಿಕೆಗಳಲ್ಲಿ ಅಲ್ಪಸ್ವಲ್ಪ ಸುದ್ದಿಬಂದಿದೆ. ವರದಿಯಲ್ಲಿ ಮಾಜಿ ಸಚಿವ ಟಿ. ಟಿ. ಕೆ. ಮತ್ತು ಅನೇಕ ಅಧಿಕಾರಿಗಳ ಬಗ್ಗೆ ಸಮಿತಿಯು ಕಟುವಾದ ಆರೋಪ ಮಾಡಿದೆಯೆಂದು ಗೊತ್ತಾಗುತ್ತದೆ.

ಲೋಕ ಸಭೆಯಲ್ಲಿ ಈ ಬಗ್ಗೆ ಸದಸ್ಯರ ಪ್ರಶ್ನೆಗೆ ಉತ್ತರವೀಯುತ್ತ ಗೃಹಸಚಿವ ಪಂತ್‌ರವರು ಸರಕಾರವು ಇನ್ನೂ ವರದಿಯನ್ನು ಪರಿಶೀಲಿಸುತ್ತಿದೆಯೆಂದೂ, ಕಾಯಿದೆಯ ರೀತ್ಯ ಸರಕಾರವು ಕ್ರಮತೆಗೆದುಕೊಳ್ಳಲಿದೆಯೆಂದೂ ತಿಳಿಸಿದ್ದಾರೆ. ವರದಿಯನ್ನು ಈಗಲೇ ಸಭೆಯ ಮುಂದೆ ಇರಿಸಲಾಗುವುದಿಲ್ಲವೆಂದೂ ತಿಳಿಸಿದ್ದಾರೆ. ಸದಸ್ಯರು ವರದಿಯನ್ನು ಪೂರ್ಣವಾಗಿ ಸಭೆಯ ಮುಂದೆ ಇರಿಸಬೇಕೆಂದು ಒತ್ತಾಯಪಡಿಸಿದ್ದಾರೆ.

ಆಹಾರ ಚಳವಳಿ

ಪಶ್ಚಿಮ ಬಂಗಾಳದಲ್ಲಿ ಸರಕಾರದ ಆಹಾರ ನೀತಿಯ ವಿರುದ್ಧ ಮತ್ತು ಏರುತ್ತಿರುವ ಆಹಾರ ಧಾನ್ಯಗಳ ಬೆಲೆಯ ವಿರೋಧವಾಗಿ ಎರಡು ವಾರಗಳಿಂದಲೂ ನಡೆಯುತ್ತಿರುವ ವಿರೋಧ ಪಕ್ಷಗಳ ಚಳವಳಿಯು ಮುಂದುವರಿಯುತ್ತಿದೆ. ಬಿ. ಸಿ. ರಾಯ್ ಸರಕಾರ ದಬ್ಬಾಳಿಕೆಯ ನೀತಿಯನ್ನನ್ನುಸರಿಸುತ್ತಾ ಸುಮಾರು 5000 ಮಂದಿ ಸತ್ಯಾಗ್ರಹಿಗಳನ್ನು ಬಂಧಿಸಿದೆ. ವಿರೋಧ ಪಕ್ಷದ ಶಾಸನಸಭಾ ಸದಸ್ಯರುಗಳನ್ನು ಸಹ ಬಂಧಿಸಲಾಗಿದೆ. ಸೆಪ್ಟಂಬರ್ 29ರಿಂದ ಚಳವಳಿಯು ಹೊಸ ಘಟ್ಟವನ್ನು ಮುಟ್ಟಿ ಸಾಮೂಹಿಕ ಚಳವಳಿ ಆರಂಭವಾಗಿದೆ.

ಉತ್ತರಪ್ರದೇಶದಲ್ಲಿ ಕಳೆದ ತಿಂಗಳಿಂದಲೂ ನಡೆಯುತ್ತಿದ್ದ ಸತ್ಯಾಗ್ರಹ ಚಳುವಳಿಯನ್ನು ಪ್ರಜಾಸೋಷಲಿಸ್ಟ್ ಪಕ್ಷ ಮತ್ತು ಕಮ್ಯೂನಿಸ್ಟ್ ಪಕ್ಷಗಳು ವಾಪಸು ಪಡೆದುಕೊಂಡಿವೆ ಸತ್ಯಾಗ್ರಹವು ಯಶಸ್ವಿಯಾಗಿದೆಯೆಂದೂ, ತನ್ನ ಉದ್ದೇಶ ಸಾಧಿಸಿದೆಯೆಂದೂ ತಿಳಿಸಲಾಗಿದೆ. ಸಂಪೂರ್ಣಾನಂದ್ ಸರಕಾರ ಈ ಸಂಬಂಧದಲ್ಲಿ 6000 ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿದೆ.

ಬಂಗಾಳದಲ್ಲಿ ನಡೆಯುತ್ತಿರುವ ಚಳುವಳಿ ಮತ್ತು ಉತ್ತರ ಪ್ರದೇಶದಲ್ಲಿ ಈ ವರೆಗೆ ನಡೆದ ಚಳವಳಿಯಿಂದಾಗಿ ಸರಕಾರವು ಆಹಾರ ಪರಿಸ್ಥಿತಿಯ ಬಗ್ಗೆ ವಿರೋಧ ಪಕ್ಷಗಳು ಸೂಚಿಸಿದ್ದ ಅನೇಕ ಕ್ರಮಗಳನ್ನು ತೆಗೆದುಕೊಳ್ಳುವಂತೆ ಮಾಡಿದೆ.

ಬರ್ಮಾದಲ್ಲಿ ಮಿಲಿಟರಿ ಒಳಸಂಚು

ಸೆಪ್ಟಂಬರ್ 25ರಂದು ಬರ್ಮಾದಲ್ಲಿ ಸೈನ್ಯ ಪಡೆಗಳು ಜನರಲ್ ನಿವಿನ್‌ರವರ ನೇತೃತ್ವದಲ್ಲಿ ಯಶಸ್ವಿಯಾದ ಒಳಸಂಚು ನಡೆಸಿತು. ಪ್ರಧಾನಿ ಉನೂರವರ ಸಂಪುಟವು ರಾಜಿನಾಮೆ ಕೊಡುವಂತೆ ಒಪ್ಪಿಸಿತು.

ಉನೂರವರ ಸಂಪುಟ ಅಧಿಕಾರವನ್ನು ಅಕ್ಟೋಬರ್ 28ರಂದು ತ್ಯಜಿಸುವುದು. ಜನರಲ್ ನಿವಿನ್‌ರವರು ಅಧಿಕಾರವಹಿಸಿಕೊಳ್ಳುವರು. ಏಪ್ರಿಲ್ 1959ರಲ್ಲಿ ಪ್ರಜಾಪ್ರಭುತ್ವ ರೀತ್ಯ ಚುನಾವಣೆ ನಡೆಸುವುದಾಗಿ ಘೋಷಿಸಲಾಗಿದೆ.

ಉನೂರವರ ಫಾಸಿಸ್ಟ್ ವಿರೋಧೀ ಜನತಾ ಪಕ್ಷದಲ್ಲಿ ಒಡಕುಂಟಾದಂದಿನಿಂದಲೂ ಬರ್ಮಾದಲ್ಲಿ ರಾಜಕೀಯ ಗೊಂದಲವೆದ್ದಿತು. ಉನೂರವರ ಸರಕಾರ ಕಮ್ಯೂನಿಸ್ಟ್ ಪಕ್ಷದ ಮೇಲೆ ಇದ್ದ ನಿಷೇಧಾಜ್ಞೆಯನ್ನು ತೆಗೆದು ಹಾಕಿದ್ದನ್ನು ಸೈನಾಧಿಕಾರಿಗಳು ಆಕ್ಷೇಪಿಸಿದ್ದಾರೆ. ಉನೂರವರ ಸರಕಾರ ಅಧಿಕಾರದಲ್ಲಿ ಮುಂದುವರಿದಲ್ಲಿ ಪ್ರಜಾಪ್ರಭುತ್ವಕ್ಕೇ ಅಪತ್ತಾಗಿದ್ದುದರಿಂದ ಸೈನ್ಯವು ಅಧಿಕಾರವಹಿಸಿಕೊಳ್ಳುತ್ತಿದೆ ಎಂದು ಜನರಲ್ ನಿವೀನ್ ತಿಳಿಸಿದ್ದಾರೆ. ತನ್ನ ಸರಕಾರವು ತಟಸ್ಥ ನೀತಿಯನ್ನೇ ಅನುಸರಿಸುವುದಾಗಿ ಹೇಳಿದ್ದಾರೆ.

ಬರ್ಮಾದಲ್ಲಿನ ಈ ಘಟನೆಗಳು ಪ್ರಜಾಪ್ರಭುತ್ವ ಚಳವಳಿಗೆ ಧಕ್ಕೆತಂದಿದೆ. ನೆರೆ ರಾಜ್ಯದ ಈ ಘಟನೆಗಳು ಕಳವಳಯುಕ್ತವೂ ಆಗಿದೆ.

ಪಾರ್ಲಿಮೆಂಟಿನಲ್ಲಿ ಕೇರಳ

ಸಂವಿಧಾನದ ರೀತ್ಯ ಕೇಂದ್ರ ಸರಕಾರ ಕೇರಳದ ಹಿತ ಕಾಪಾಡುತ್ತಿದೆಯೆ ?

ಲೋಕಸಭಾಧಿವೇಶನದ ಆರಂಭದ ದಿನವೇ ಕೇರಳದಲ್ಲಿ "ಅಭದ್ರತೆ"ಯ ಬಗ್ಗೆ ನಿಲುವಳಿ ಸೂಚನೆ ಮಂಡಿಸಲಾಯಿತು. ಅದನ್ನು ಸಭಾಧ್ಯಕ್ಷರು ಮುಂದಿನ ಅಧಿವೇಶನದವರೆಗೆ ತಡೆಹಿಡಿದಿದ್ದಾರೆ. ಅಧಿವೇಶನದ ಕೊನೆಯ ದಿನ ಮುಖ್ಯಮಂತ್ರಿ ಇ. ಎಂ. ಎಸ್. ರವರ ಮೇಲೆ ಹಕ್ಕುಬಾಧ್ಯತ ನಿಲುವಳಿ ಸೂಚನೆಯನ್ನು ಸಭೆಯಲ್ಲಿ ಮಂಡಿಸಲು ಸಭಾಧ್ಯಕ್ಷರು ಅನುಮತಿಯಿತ್ತರು.

ಇ. ಎಂ. ಎಸ್. ರವರು ಗೃಹಸಚಿವ ಪಂತ್‌ರವರಗೆ ಕಳಿಸಿಡ ತಂತಿಯಲ್ಲಿ ಸದಸ್ಯರ ಬಗ್ಗೆ ಅಕ್ಷೇಪಾರ್ಹವಾದ ದೂಷಣೆ ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದ್ದ ಸಾರಾಂಶದ ಆಧಾರದ ಮೇಲೆ ಎಂ. ಆರ್. ಮಸಾನಿಯವರು, ಸದಸ್ಯರ ಹಕ್ಕು ಬಾಧ್ಯತೆಗೆ ಧಕ್ಕೆ ಒದಗಿದೆ ಎಂದು ನಿಲುವಳಿ ಸೂಚನೆಯನ್ನು ಸಭೆಯ ಮುಂದೆ ತಂದಿದ್ದರು. ಸಭಾಧ್ಯಕ್ಷರು ಅಧಿವೇಶನದ ಕೊನೆಯ ದಿನ ಮಸಾನಿಯವರಿಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಇತ್ತರು. ರಾಜ್ಯ ಸರಕಾರದ ಮುಖ್ಯ ಮಂತ್ರಿಯೊಬ್ಬರ ವಿರೋಧವಾಗಿ ಮಂಡಿತವಾದ ನಿಲುವಳಿ ಸೂಚನೆ ಇದೇ ಮೊದಲ ಬಾರಿ. ಅಧ್ಯಕ್ಷರು ಕಮ್ಯೂನಿಸ್ಟ್ ಸದಸ್ಯರು ಎತ್ತಿದ ಕ್ರಿಯಾಲೋಪಗಳನ್ನು ತಳ್ಳಿಹಾಕಿದರು. ಅಧ್ಯಕ್ಷರ ನಿರಾಕರಣೆಯನ್ನು ಪ್ರತಿಭಟಿಸಲು ಕಮ್ಯೂನಿಸ್ಟ್ ಸದಸ್ಯರು ಎ. ಕೆ. ಗೋಪಾಲನ್‌ರವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು. ಎರಡು ಗಂಟೆಗಳ ತೀವ್ರವಾದ ಚರ್ಚೆ ನಡೆದು. ನಿಲುವಳಿ ಸೂಚನೆ ಮಂಡಿಸಲು ಅವಕಾಶವಿತ್ತುದು ಇಂದು ಅನೇಕ ಘಟನಾತ್ಮಕ ಅಂಶಗಳನ್ನು ಮುಂದೆತಂದಿದೆ. ಚರ್ಚೆ ಅಪೂರ್ಣವಾಗಿ ನಡೆದು ಮುಂದಿನ ಅಧಿವೇಶನದಲ್ಲಿ ಮತ್ತೆ ಬರಲಿದೆ. ಇದರಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ನಡುವೆ ವ್ಯವಹಾರದ ರಹಸ್ಯ ಕಾಪಾಡುವ ಮುಖ್ಯ ಪ್ರಶ್ನೆ ಅಡಗಿದೆ.

ಹಿನ್ನೆಲೆಯೇನು ?

ಡಾ॥ ಕೆ. ಬಿ. ಮೆನನ್‌ರವರು ಕೇರಳದಲ್ಲಿ "ಅಭದ್ರತೆ"ಯ ಕುರಿತು ಮಂಡಿಸಿದ್ದ ನಿಲುವಳಿ ಸೂಚನೆಯ ಮೇಲೆ, ಕೇರಳ ಪರಿಸ್ಥಿತಿಯನ್ನು ಕುರಿತು ಲೋಕಸಭೆ ಚರ್ಚಿಸುವುದರ ಯುಕ್ತಾಯುಕ್ತತೆ ವಿಷಯಕ್ಕೆ ಸಂಬಂಧಿಸಿ, ಮುಖ್ಯ ಮಂತ್ರಿ ಇ. ಎಂ. ಎಸ್. ರವರು ಗೃಹಸಚಿವರಿಗೆ ಅಧಿಕೃತವಾಗಿ ರಹಸ್ಯವಾದ ತಂತಿಯನ್ನು ಕಳಿಸಿದ್ದರು. ಅದರ ಕೆಲವಂಶಗಳು ಹೇಗೋ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಇದನ್ನು ರಹಸ್ಯವಾಗಿರಿಸಬೇಕೆಂದು ಇ.ಎಂ.ಎಸ್. ರವರು ಕೇಳಿಕೊಂಡಿದ್ದರೆಂದು ಪಂತ್‌ರವರೇ ತಿಳಿಸಿದ್ದಾರೆ. ನಂತರ ಇ.ಎಂ.ಎಸ್. ರವರು ಮತ್ತೊಂದು ತಂತಿಯನ್ನು ಕಳಿಸಿದ್ದರು. ಅದೂ ಸಹ ರಹಸ್ಯವಾಗಿದ್ದುದು. ಅದರಲ್ಲಿ ಸಭಾಧ್ಯಕ್ಷರಲ್ಲಿ ಕೋರಿಕೆಯೊಂದನ್ನು ಗೃಹಸಚಿವರ ಮೂಲಕ ಮಾಡಿಕೊಳ್ಳಲಾಗಿತ್ತು. ಪತ್ರಿಕೆಗಳ ವರದಿಯ ಮೇಲೆ ಆಧಾರಗೊಂಡು ಮಸಾನಿಯವರು ಹಕ್ಕು ಬಾಧ್ಯತಾ ಪ್ರಶ್ನೆಯನ್ನು ಎತ್ತಿದ್ದುದು.

ಪಂತ್‌ರವರ ಕರ್ತವ್ಯ ಪರಿಪಾಲನೆ ?

ಸಂವಿಧಾನದ 355 ನೆಯ ವಿಧಿಯು ರಾಜ್ಯ ಸರಕಾರದ ಹಿತವನ್ನು ಕಾಪಾಡುವ ಹೊಣೆ ಕೇಂದ್ರ ಸರಕಾರದ್ದಾಗಿದೆ ಎಂದು ಹೇಳುತ್ತದೆ.

ಇದರಲ್ಲಿ ರಾಜ್ಯ ಹಾಗೂ ಕೇಂದ್ರ ಸರಕಾರಗಳ ನಡುವೆ ನಡೆಯುವ ಪತ್ರ ವ್ಯವಹಾರವು ರಹಸ್ಯವಾಗಿರತಕ್ಕದ್ದು. ಸಭೆಯ ಮುಂದೆ ಪತ್ರ ವ್ಯವಹಾರವನ್ನು ತರುವುದು ಕೇಂದ್ರ ಹಾಗೂ ರಾಜ್ಯ ಸರಕಾರಗಳ ನಡುವಣ ಸಂಬಂಧಕ್ಕೆ ಬಾಧಕವುಂಟಾಗುತ್ತದೆ.

ಗೃಹಸಚಿವರು ತಾವು ಕರ್ತವ್ಯ ಪರಿಪಾಲನೆಯ ದೃಷ್ಟಿಯಿಂದ ಕೇರಳ ಮುಖ್ಯ ಮಂತ್ರಿಗಳ ಅಪೇಕ್ಷೆಯನ್ನು ಈಡೇರಿಸುವ ದೃಷ್ಟಿಯಿಂದ, ಮುಂದೆ ತಪ್ಪು ಅಭಿಪ್ರಾಯ ಬರಲು ಅವಕಾಶಬಾರದಿರಲೆಂದು ತಂತಿಯನ್ನು ಸಭಾಧ್ಯಕ್ಷರಿಗೆ ತೋರಿಸಿದುದಾಗಿ ಹೇಳಿದ್ದಾರೆ. ಮತ್ತು ಎರಡನೆಯ ತಂತಿಯನ್ನು ಸಭಾಧ್ಯಕ್ಷರಿಗೆ ತಾವು ಕೊಟ್ಟುದಾಗಿಯು ತಿಳಿಸಿದ್ದಾರೆ.

ಗೃಹಸಚಿವರ ಕರ್ತವ್ಯ ಪರಿಪಾಲನೆಯಲ್ಲಿ ಅಡಗಿರುವ ಅಂಶ ಇಷ್ಟೆ. ತಮಗೆ ಬಂದಿದ್ದ ತಂತಿಯ ವಿಷಯವನ್ನು ವಿವರಿಸುವದನ್ನು ಬಿಟ್ಟು ಅದನ್ನು ಸಭಾಧ್ಯಕ್ಷರಿಗೆ ತೋರಿಸಿದ್ದು ಸರಿಯೆ ?

ಸಂವಿಧಾನದ ವಿಧಿಯರೀತ್ಯ ಗೃಹಸಚಿವರು ತಮ್ಮ ಕರ್ತವ್ಯ ಪರಿಪಾಲಿಸಿದ್ದಾರೆಯೆ?

ಸಭಾಧ್ಯಕ್ಷರು ನಿಲುವಳಿ ಸೂಚನೆಗೆ ಅವಕಾಶವಿತ್ತಿದ್ದರೂ, ಸಭೆಯಲ್ಲಿ ಅದನ್ನು ಚರ್ಚಿಸಲು ಅಧಿಕಾರವಿದೆಯೇ ಎಂಬ ಪ್ರಶ್ನೆಯು ಬಂದಿದೆ.

ಕ್ರಿಯಾಲೋಪ

ಕಮ್ಯೂನಿಸ್ಟ್ ಸದಸ್ಯ ವಿ. ಪಿ. ನಾಯರ್‌ರವರು ಕ್ರಿಯಾಲೋಪವೆತ್ತಿ ಮಾತನಾಡುತ್ತ ಈ ರೀತಿ ಹೇಳಿದ್ದಾರೆ. "ಕೇರಳ ಮುಖ್ಯ ಮಂತ್ರಿಗಳು ಗೃಹಸಚಿವರಿಗೆ ಕಳಿಸಿದ್ದ ತಂತಿಯಲ್ಲಿ ಬಳಸಲಾಗಿದುವುದೆಂದು ಹೇಳಲಾದ ಕೆಲವು ಪದಗಳು ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನೇ ಆಧಾರವಾಗಿರಿಸಿಕೊಂಡಿರುವ ಮಸಾನಿಯವರ ನಿಲುವಳಿಯನ್ನು ಸಭೆಯಲ್ಲಿ ಚರ್ಚಿಸುವುದು ನಿಯಮ ಬದ್ಧವಾಗಿಲ್ಲ. ಸಂಬಂಧಪಟ್ಟ ದಾಖಿಇಲ್ಲದಿರುವುದರಿಂದ ಕ್ರಮವಾಗಿಲ್ಲ.

ಸಭೆಯಲ್ಲಿ ದಾಖಲೆ ತರಬೇಕೆಂದು ಕೇಳುವ ಹಕ್ಕಿದ್ದರೂ ಸರಕಾರವನ್ನು ಒತ್ತಾಯಪಡಿಸುವಂತಿಲ್ಲ. ಏಕೆಂದರೆ ಅದು ರಾಜ್ಯ ಹಾಗೂ ಕೇಂದ್ರ ಸರಕಾರದ ನಡುವಣ ರಹಸ್ಯ ವ್ಯವಹಾರ. ಗೃಹಸಚಿವರು ದಾಖಲೆಯನ್ನೇನಾದರೂ ಮಂಡಿಸಿದಲ್ಲಿ ಅವರ ಕರ್ತವ್ಯ ಪರಿಪಾಲನೆಗೆ ಚ್ಯುತಿ ಬರುತ್ತದೆ. ಅದ್ದರಿಂದಾಗಿ ಈ ಸಭೆಯಲ್ಲಿ ಚರ್ಚಿಸುವುದು ಸರಿಯಲ್ಲ.

ಲೋಕ ಸಭೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಉಪನಾಯಕ ಎ. ಕೆ. ಗೋಪಾಲನ್ ರವರು ಮಾತನಾಡುತ್ತ "ಸಭೆಯ ಮುಂದೆ ಮೊದಲ ಬಾರಿಗೆ ಕೇಂದ್ರ ಮತ್ತು ರಾಜ್ಯ ಸರಕಾರದ ನಡುವೆ ಪತ್ರ ವ್ಯವಹಾರದ ವಿಷಯವನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗಿದೆ. ರಾಜ್ಯದ ಮುಖ್ಯ ಮಂತ್ರಿಯವರನ್ನು ಸಭೆಯ ಮುಂದೆ ಕರೆಸಬೇಕೆಂದೂ ಹೇಳಲಾಗಿದೆ. ಈ ಅಂಶಗಳು ಕೇಂದ್ರ ಮತ್ತು ರಾಜ್ಯಗಳ ನಡುವೆ ಸಂಬಂಧಕ್ಕೆ ನಿಕಟ ಸಂಪರ್ಕವುಳ್ಳದಾಗಿದೆ. ರಾಜ್ಯ ಸರಕಾರದ ಹಿತವನ್ನು ಕಾಪಾಡುವುದು ಕೇಂದ್ರ ಸರಕಾರದ ಕರ್ತವ್ಯವಾಗಿದೆ. ಎಂದು ತಿಳಿಸಿ, ಕೇಂದ್ರ ಸರಕಾರವು ಕೇರಳದ ಹಿತಗಳನ್ನು ಕಾಪಾಡುತ್ತಿಲ್ಲ ಎಂದು ತಿಳಿಸಿದ್ದಾರೆ.

ಕಮ್ಯೂನಿಸ್ಟ್ ಸದಸ್ಯರ ಕ್ರಿಯಾಲೋಪವನ್ನು ತಳ್ಳಿಹಾಕಿ ನಿಲುವಳಿ ಸೂಚನೆಗೆ ಅನುಮತಿ ಕೊಡಲಾಗಿದೆ.

ಸಭೆಯಲ್ಲಿ ನಡೆದ ಚರ್ಚೆಯು ಕೇಂದ್ರ ಸರಕಾರ ಕೇರಳದ ಬಗ್ಗೆ ತಳಿದಿರುವ ಧೋರಣೆಯ ದ್ವಿಮುಖ ಸ್ವರೂಪವನ್ನು ವ್ಯಕ್ತಗೊಳಿಸುತ್ತದೆ.

★ ಕೇರಳ........ ★

ರೂ. 130ಕ್ಕೊಂದು ಸೈಕಲ್

ಕೇರಳ ಸರಕಾರವು ಸ್ಥಾಪಿಸಿರುವ ಬೈಸಿಕಲ್ ತಯಾರಿಕಾ ಕಾರ್ಖಾನೆಯು ಬೈಸಿಕಲ್ ತಯಾರಿಕೆಯನ್ನು ಪ್ರಾರಂಭಿಸಿದೆ. ಈಗಾಗಲೇ ಮಾರಾಟಕ್ಕೆ ಅದು ಸಿದ್ಧವಾಗಿದೆ. ಬೈಸಿಕಲ್ ಬೆಲೆ ಸುಮಾರು 130 ರೂ. ಗಳೆಂದು ಗೊತ್ತಮಾಡಲಾಗಿದೆ. ಬೆಲೆ ನಿಗದಿ ಮಾಡುವಾಗ ಸರಕಾರವು ಸೈಕಲ್ ಒಂದಕ್ಕೆ ಕೇವಲ 5 ರೂ. ಲಾಭವನ್ನಿರಿಸಿಕೊಂಡಿದೆ.

ಸಂಧಾನ ಮೂಲಕ 4,384 ಕಾರ್ಮಿಕ ವಿವಾದಗಳ ಇತ್ಯರ್ಥ

ಏಪ್ರಿಲ್ 1, 1957 ರಿಂದ ಮಾರ್ಚ್ 31, 1958ರ ಕಾಲಾವಧಿಯಲ್ಲಿ ಕೇರಳದಲ್ಲಿ ಶೇಕಡ 77ರಷ್ಟು ಕೈಗಾರಿಕಾ ವಿವಾದಗಳು ಸಂಧಾನದ ಮೂಲಕ ಇತ್ಯರ್ಥವಾಗಿದೆಯೆಂದು ಸರಕಾರದ ಪ್ರಕಟಣೆಯೊಂದು ತಿಳಿಸುತ್ತದೆ.

ಒಟ್ಟು 6,285 ವಿವಾದಗಳ ಪೈಕಿ 4,834 ವಿವಾದಗಳು ಸಂಧಾನದಿಂದ ಇತ್ಯರ್ಥವಾಯಿತು. ಎರಡೂ ವಿವಾದಗಳನ್ನು ಮಾತ್ರ ಒತ್ತಾಯ ಪೂರ್ವಕವಾಗಿ ಟ್ರಿಬ್ಯೂನಲ್ಲಿಗೆ ಒಪ್ಪಿಸಲಠಯಿತು. ಉಳಿದ 191 ವಿವಾದಗಳನ್ನು ಎರಡು ಪಕ್ಷಗಳ ಒಪ್ಪಿಗೆಗನುಗುಣವಾಗಿ ಟ್ರಿಬ್ಯೂನಲ್ಲಿಗೆ ಒಪ್ಪಿಸಲಾಯಿತು.

(೬ನೇ ಪುಟ ನೋಡಿ)

ವಾರದ ಕತೆ

ಜೋಡಿದಾರರ ಕಾಣಿಕೆ !

'ಪರಂಜ್ಯೋತಿ'

ಕೆಲುಗಳು ಚುರುಗುಡುತ್ತಿದ್ದವು; ಅಂದಿನ ಬಿಸಿಲಿಗೆ ತಲೆಸಿಡಿದು ಹೋಗಬಹುದೆಂದು ಅಂಜಿಕೆಯಾಗಿತ್ತು—ನನಗೆ.

ತಿರುಗಾವಲು ಸಂತೆಯಲ್ಲಿ ಮೊಕ್ಕಾಂ ಮಾಡಿರುವ ಮಹಾಜನ ಟೂರಿಂಗ್ ಟಾಕೀಸಿನಲ್ಲಿ ಪ್ರದರ್ಶಿತವಾಗುತ್ತಿದ್ದ, ಕಳೆದ ಯುಗದಷ್ಟು ಹಳತಾದ ಕನ್ನಡ ಚಿತ್ರವೊಂದನ್ನು ನೋಡಲು, ನಮ್ಮ ಹಳ್ಳಿಯ ಹತ್ತಾರು ಜನರ ಗುಂಪೊಂದು, ಬಿಸಿಲನ್ನೂ ಲೆಕ್ಕಿಸದೆ ಉತ್ಸಾಹದಿಂದ ನಡೆಯುತ್ತಿತ್ತು.

ನಮ್ಮೆಲ್ಲರನ್ನೂ ಹಿಂದೆ ಹಾಕಿ ನಡೆದ ಹೆಂಗಸರ ಗುಂಪು ನಮ್ಮ ಅಭಿಮಾನವನ್ನು ಕೆರಳಿಸಿತು. ತಲೆಯ ಮೇಲೆ ಬುಟ್ಟಿ ಹೊತ್ತು, ತಮಗೆ ತಿಳಿದ ಮಟ್ಟಿನ ವ್ಯವಹಾರದ ಬಗ್ಗೆ ಮಾತನಾಡುತ್ತಾ, ಎಲೆಯಡಿಕೆ ಜಗಿದು ರಂಗಾದ ತುಟಿಗಳಲ್ಲಿ ಸುಳಿ ಮಿಂಚಿನಂಥಾ ನಗೆ ನಗುತ್ತಾ, ನಡೆದು ಹೋಗುತ್ತಿದ್ದ ಆ ಸ್ತ್ರೀಯರನ್ನು ಹಿಂಬಾಲಿಸಲಾರದಾದೆವು—ನಾವು.

ಸೋಲನ್ನೊಪ್ಪಿಕೊಳ್ಳಲಾರದ ಲಕ್ಕ ಜಾನಪದ ಗೀತೆಯೊಂದನ್ನು ಸ್ವರವೇರಿಸಿ ಹಾಡಿದ. ಅದು ಮುಂದೆ ನಡೆದುಹೋಗುತ್ತಿದ್ದವರ ನಡೆಯನ್ನು ಇನ್ನೂ ಚುರುಕುಗೊಳಿಸಿ, ನಾವು ಬಿಸಿಲಿನಲ್ಲಿ ಬೆಂದ ಹುಳುಗಳಂತೆ ಹಿಂದೆ ಉಳಿದೆವು.

ಭಗ್ನ ಹೃದಯಿಯಂಥ ಬರಡು ಬೇವಿನ ಮರದ ನೆರಳಿನಲ್ಲಿ ಅರೆನಿಮಿಷ ನಿಂತೆವು. ಸಂತೆಗೆ ಹೋಗುತ್ತಿದ್ದ ಜನರು ಮುಂದೆ ನಡೆದರು. ನಮ್ಮ ಗುಂಪು ಸೊಂಪಿಲ್ಲದ ನೆರಳಿನಾಸರೆಗಾಗಿ ಹಿಂದುಳಿಯಿತು.

ಬೆವರಿನ ಹನಿಗಳು ಶರೀರವನ್ನು ತೋಯಿಸಿದವು. ನಮ್ಮಲ್ಲಿ ಇಬ್ಬರು ಮೂವರಿಗೆ ಸಾಕು—ಸಾಕಾಗಿತ್ತು. ಬಾಯಿನ ನೀರು ಬತ್ತಿಹೋಗಿತ್ತು. ಆದರೆ ಉತ್ಸಾಹಿ ಲಕ್ಕ ಇನ್ನೂ ಹಾಡುತ್ತಲೇ ಇದ್ದ.

'ಹತ್ತಿರದಲ್ಲಿ ಸ್ವಲ್ಪ ನೀರಿದ್ದರಾಗಿತ್ತು' —ಎಂದು ನಾನು ನಾಲಿಗೆಯನ್ನು ಹೊರಳಾಡಿಸಿದೆ. ಅನಂತರ ಸುತ್ತಲೂ ನೋಡಿದೆ. ನೀರು ಸಿಕ್ಕುವ ಚಿಹ್ನೆಗಳರಲಿಲ್ಲ. ಆದರೆ ಮುಳ್ಳು ಬೇಲಿಯಾಚೆಯ ಸಣ್ಣ ಹೊಂಡದಲ್ಲಿ ಬಿಸಿಲನ್ನೂ ಲೆಕ್ಕಿಸದೆ, ಹರಿದ ಬಟ್ಟೆಯ; ಕರಿಯ ಮೈಯ್ಯಿನ; ಬೆಳೆದು ಕೆದರಿದ ಕೂದಲಿನ ಮಾನವ ಪ್ರಾಣಿಯೊಂದು ತನ್ನ ಮುರಿದ ಹೃದಯವನ್ನು ಬಿಸಿಲಿಗೆ ಒಣಗ ಹಾಕಿಕೊಂಡಿದ್ದುದನ್ನು ಕಂಡೆ. ನನ್ನ ನರಮಂಡಲವನ್ನು, ಹರಿತವಾದ ಚೂರಿಯಿಂದ ಕೊಯ್ದಂತೆ ಭಾಸವಾಯಿತು. 'ಅಯ್ಯೋ ಪಾಪ!'—ಎಂದು ನನ್ನ ಹೃದಯದಿಂದ ಅನುತಾಪದ ಕೂಗು ಹೊರಬಂದಿತು.

ಲಕ್ಕ ಹಾಡು ನಿಲ್ಲಿಸಿದ. ನನ್ನ ದೃಷ್ಟಿ ಕೇಂದ್ರೀಕೃತವಾಗಿದ್ದತ್ತ ದೃಷ್ಟಿ ಹರಿಸಿದ ಕೆಂಗ, 'ಓ'—ಎಂದ. ಎಲ್ಲರೂ ಮೌನವಾದರು.

'ಹುಚ್ಚ್ರಾಮಣ್ಣ—ಹುಚ್ ರಾಮಣ್ಣ!'—ಎಂದ ಲಕ್ಕ.

ನಮ್ಮಲ್ಲಿ ಒಬ್ಬಿಬ್ಬರನ್ನುಳಿದು, ಎಲ್ಲರಿಗೂ ಆ ಹುಚ್ಚರಾಮಣ್ಣನ ಸಂಗತಿ ತಿಳಿದಿತ್ತು. ಆತನ ಬಗ್ಗೆ ಮಾತು ಪ್ರಾರಂಭವಾದ ಕೂಡಲೇ, ರೈತ ಮಕ್ಕಳಾದ ನಮ್ಮ ಹೃದಯಗಳೆಲ್ಲವೂ, ಒಂದೇ ಬಗೆಯ ಅನುತಾಪದ—ಅನುಕಂಪದ ಭಾವನೆಯನ್ನು ತಳೆದವು. ನಾವು ಆ ಹರುಕು ನೆರಳಿನಲ್ಲಿಯೇ ಕುಳಿತೆವು. ನಮ್ಮಲ್ಲಿ ಹಿರಿಯನಾದ ನಿಂಗಣ್ಣ, ತನಗೆ ತಿಳಿದ ಹುಚ್ಚುರಾಮಣ್ಣನ ಕತೆಯನ್ನು ಹೇಳತೊಡಗಿದ.

o o o

ಪುಟ್ಟನ ದೊಡ್ಡಿ ಫಲವತ್ತಾದ ಭೂಮಿಯ ಮಕ್ಕಳು ವಾಸಿಸುತ್ತಿದ್ದ ಊರು. ಸುಗ್ಗಿಯೆಂದರೆ ಹಿಗ್ಗೆಂದರೆ—ಅದನ್ನು ಬಲ್ಲವರು ಪುಟ್ಟನ ದೊಡ್ಡಿಯ ರೈತರು. ಮಣ್ಣಿನಲ್ಲಿ ಹೊನ್ನು ತೆಗೆಯುವುದನ್ನು ಬಲ್ಲವರು—ಅವರು. ಊರಿನ ಸುತ್ತಲಿನ ನೂರಾರು ಎಕರೆ ನೆಲವನ್ನು, ರೈತರು ತಮ್ಮ ಹೃದಯಗಳಿಂತಲೂ ಉನ್ನತವಾಗಿ ಭಾವಿಸಿದ್ದರು—ನಂಬಿದ್ದರು.

ಭೂಮಿತಾಯಿಯೂ ಅಷ್ಟೆ. ಮಕ್ಕಳನ್ನು ಕಡೆಗಾಣಲಿಲ್ಲ. ಬೆಳೆಯುವುದರಲ್ಲಿ ಬೇಸರಗೊಳ್ಳಲಿಲ್ಲ. ಬರಡಾದರೆ ಮಕ್ಕಳು ನೊಂದುಕೊಳ್ಳುತ್ತಾರೆಂದು, ಒಂದಕ್ಕೆ ಹತ್ತಾಗಿ ಬೆಳೆದು, ದವಸಧಾನ್ಯಗಳ ರೂಪದಲ್ಲಿ ರೈತರ ಹೃದಯಗಳನ್ನು ತುಂಬಿದ್ದಳು.

ರಾಮಣ್ಣ ಪುಟ್ಟನ ದೊಡ್ಡಿಯ ರೈತರಲ್ಲಿ ಮುಖ್ಯನಾದವನು. ಎಲ್ಲರಿಗೆ ಮುಂಚೆ 'ನೂರು ಗಿಡ ಬಾಳೆ' ಬೆಳೆದವನು—ಅವನು. ಊರಿಗೆ ಬಂದವರನ್ನು ದೂರದಿಂದಲೇ ಕೈಬೀಸಿ ಕರೆಯುವ ತೆಂಗಿನ ಮರಗಳನ್ನು ತಂದು ಬೆಳೆಸಿದವನು—ರಾಮಣ್ಣ. ಹೊಸ ಪೈರು; ಹೊಸ ತರದ ವ್ಯವಸಾಯ, ಆತನ ಜನ್ಮಫಲ. ವರ್ಷಕ್ಕೊಮ್ಮೆ ಏನನ್ನಾದರೂ ಹೊಸದಾಗಿ ನಿರ್ಮಿಸಿ, ಹೆಚ್ಚು ಬೆಳೆ ಬೆಳೆಯದಿದ್ದರೆ, ಆತ ರಾಮಣ್ಣನೇ ಅಲ್ಲ. ಅದರಿಂದಾಗಿಯೇ ಊರಿನ ಮುತ್ತಲಿದ ರೈತರು ಆತನನ್ನು ಪ್ರೀತಿಸುತ್ತಿದ್ದರು—ಗೌರವಿಸುತ್ತಿದ್ದರು. ರಾಮಣ್ಣ ನಿಜವಾದ ಮಣ್ಣಿನ ಮಗನೆಂದು ಹೊಗಳುತ್ತಿದ್ದರು.

ಸುಗ್ಗಿಯ ವೇಳೆ ಬಂದಿತೆಂದರೆ, ಪುಟ್ಟನ ದೊಡ್ಡಿಯ ರೈತರಿಗೆ, ಹಿಗ್ಗಿನ ಬದಲು ಸಂಕಟವುಂಟಾಗುತ್ತಿತ್ತು. ಅದಕ್ಕೆ ಕಾರಣ—ಪುಟ್ಟನ ದೊಡ್ಡಿ ಜೋಡಿ ಗ್ರಾಮವಾಗಿದ್ದುದು!

ಒಂದು ವರ್ಷದ ವರೆಗೆ ತನ್ನ ಹೃದಯದಂತೆ ಜೋಪಾನ ಮಾಡಿ, ಪ್ರೀತಿಯಿಂದ ಭಕ್ತಿಯಿಂದ ಬೆಳೆಸಿದ ಬೆಳೆಗೆ ಒಡೆಯನೊಬ್ಬನಿದ್ದಾನೆಂಬುದನ್ನು ನೆನೆದಾಗ; ತನ್ನ ದುಡಿಮೆ, ತನ್ನ ಶ್ರಮದ ಫಲ ಮತ್ತೊಬ್ಬನ ಹಿಗ್ಗಿನ ಬಾಳುವೆಗೆ ಬಲಿಯಾಗುವುದನ್ನು ನೆನೆದಾಗ-ರೈತ ಹೃದಯಕ್ಕಾಗುತ್ತಿದ್ದ ವೇದನೆಯನ್ನು, ಆ ಭೂಮಿತಾಯಿ ಮಾತ್ರ ಬಲ್ಲಳು!

ಆದರೂ ರೈತರು ತಮ್ಮ ಕಾಯಕವನ್ನು ಬಿಟ್ಟವರಲ್ಲ. ಉತ್ಸಾಹವನ್ನು ಕಡಿದು ಹಾಕಿದವರಲ್ಲ. ವರ್ಷ ವರ್ಷಕ್ಕೆ ಹೆಚ್ಚಿನ ಬೆಳೆಯನ್ನು ಬೆಳೆಯತೊಡಗಿದ್ದರು. ಅದಕ್ಕೆ ಕಾರಣ ಹಿರಿಯ ಜೋಡಿದಾರರು ರೈತರ ಮೇಲೆ ತೋರುತ್ತಿದ್ದ ವಿಶ್ವಾಸ. ಜೋ

ನೀವೇನು ಹೇಳುತ್ತೀರಿ?

ರಾಜಕೀಯ ಕೊಲೆ ?

ಕೇರಳದಲ್ಲಿ ಪ್ರವಾಸ ಮಾಡಿದ ಅಧ್ಯಕ್ಷ ಢೇಬರರು ಕಮ್ಯೂನಿಸ್ಟರ ಹಿಂಸಾ ಕೃತ್ಯಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ಒದಗಿಸಿದ್ದಾರೆ. ರಾಜಕೀಯ ಕೊಲೆಗಳು ಇತರ ಕೊಲೆಗಳಿಗಿಂತ ಬೇರೆಯಾದುದು ಎಂದು ನೆಹರೂರವರು ಹೇಳಿರುವುದನ್ನು ಒಪ್ಪದಿರಲು ಸಾಧ್ಯವೇ ?

ಕೇರಳದ ಬಗ್ಗೆ ವಿಶೇಷವಾಗಿ ಬರೆಯುತ್ತಿರುವ ಪತ್ರಿಕೆಗಳನ್ನು ನೋಡಿದಲ್ಲಿ ಈ ವಿಷಯ ಅರಿವಾಗುತ್ತದೆ.

ಅಧ್ಯಕ್ಷ ಢೇಬರರ ಸಭೆಯೊಂದರಿಂದ ಹಿಂತಿರುಗುತ್ತಿದ್ದ ಶ್ರೀ ಪಿ. ಕೆ. ಚಾಕೋ ಎಂಬವರ ಮೇಲೆ ಧಾಳಿಯಾಗಿ ಅವರು ಆಸ್ಪತ್ರೆಯಲ್ಲಿ ಮಡಿದರೆಂದೂ, ಅವರ ಶವಸಂಸ್ಕಾರಕ್ಕೆ ವಿರೋಧ ಪಕ್ಷದ ನಾಯಕರಾದ ಪಿ. ಟಿ. ಚಾಕೋರವರು ಹೋಗಿದ್ದರೆಂದೂ ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಟಾಯಿಂಸ್ ಆಫ್ ಇಂಡಿಯಾ ಪತ್ರಿಕೆಗಳು ವರದಿ ಮಾಡಿದ್ದುವು.

ಆದರೆ ಈ ಪತ್ರಿಕೆಗಳು ಪೋಸ್ಟ್ ಮಾರ್ಟಂ ಆದ ನಂತರದಲ್ಲಿ ಹೊಂಬಿದ್ದ ನಿಜಾಂಶವನ್ನು ಮಾತ್ರ ಪ್ರಕಟಿಸುವ ಗೊಡವೆಗೆ ಹೋಗಲಿಲ್ಲ, ಏಕೆಂದರೆ ಪೋಸ್ಟ್ ಮಾರ್ಟಂ ಪರೀಕ್ಷೆಯಲ್ಲಿ ಆತ ಕ್ಷಯ ರೋಗದಿಂದಾಗಿ ಮತ್ತು ನಿಶ್ಶಕ್ತತೆಯ ಪರಿಣಾಮವಾಗಿ ರಸ್ತೆಯಲ್ಲಿ ಹೋಗುತ್ತಿರುವಾಗ ಸತ್ತನೆಂದೂ, ಆತನ ಸಾವು ನೈಸರ್ಗಿಕವಾದದ್ದೆಂದೂ ತಿಳಿದುಬಂದಿತು. ನಿಜಾಂಶವನ್ನು ಮರೆಮಾಚಲು ಪತ್ರಿಕೆಗಳು ತಮ್ಮ ಕೈಯ್ಯಲ್ಲಿರುವವರೆಗೆ, ಇದನ್ನು ರಾಜಕೀಯ ಕೊಲೆ ಎಂದು ಕರೆಯಬಹುದೆ ?

ಟಿ. ಟಿ. ಕೆ. - ಐ. ಸಿ. ಎಸ್. ಸಂಬಂಧ !

ಟಿ. ಟಿ. ಕೆ. ಕೈಗಾರಿಕಾ ಮತ್ತು ವಾಣಿಜ್ಯ ಖಾತೆ ಸಚಿವರಾಗಿದ್ದಾಗ, ಇಲಾಖಾ ಕಾರ್ಯದರ್ಶಿ ಶ್ರೀ ರಂಗನಾಥನ್ ಆಗಿದ್ದರು. ಇವರ ಪತ್ನಿ ಟಿ. ಟಿ. ಕೆ. ಸಂಬಂಧಿ. ಟಿ. ಟಿ. ಕೆ. ದೆಹಲಿಯಲ್ಲಿರುತ್ತಿದ್ದಾಗ ಊಟ ರಂಗನಾಥನ್‌ರವರಿಂದ ಬರುತ್ತಿತ್ತು.

ಅಂದು ಟಿ. ಟಿ. ಕೆ. ಬೆಂಬಲಿಗರಾಗಿದ್ದವರು ಟಿ. ಟಿ. ಕೆ. ಮಾಡಿದ ಉಪಕಾರವನ್ನು ಮರೆತಿಲ್ಲ. ಈ ಐ. ಸಿ. ಎಸ್. ಅಧಿಕಾರಿಯ ಪತ್ನಿ ಶ್ರೀಮತಿ ರಂಗನಾಥನ್‌ರವರಿಗೆ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಗೋಯೆಂಕಾರವರು ಸಾವಿರಕ್ಕೂ ಹೆಚ್ಚು ಸಂಬಳವಿತ್ತು ಕೆಲಸಕ್ಕೆ ನೇಮಿಸಿದ್ದಾರೆ. ಈಕೆ ಪತ್ರಕರ್ತಳಾಗಿದ್ದುದು ಯಾವಾಗ ಎಂದು ಯಾರಿಗೂ ತಿಳಿಯದು.

ಉನ್ನತಾಧಿಕಾರಿಗಳ ಹತ್ತಿರದ ಸಂಬಂಧಿಗಳು ಖಾಸಗೀ ಉದ್ಯಮಗಳಲ್ಲಿ ಕೆಲಸ ಮಾಡುವುದಕ್ಕೆ ಮುನ್ನ ಸರಕಾರದ ಅನುಮತಿ ಪಡೆಯಬೇಕೆಂದು ನಿಯಮವಿದೆ. ಆ ನಿಯಮ ಈ ಸಂಬಂಧದಲ್ಲಿ ಎಲ್ಲಿ ಹೋಯಿತು ?

ಶ್ರೀ ರಂಗನಾಥನ್‌ರವರಿಂದ ಪ್ರತ್ಯುಪಕಾರ ಪಡೆಯದೆ. ಶ್ರೀ ಗೋಯೆಂಕಾ ಸುಮ್ಮನೆ ಕೆಲಸ ಕೊಟ್ಟಿದ್ದಾರೆಯೆ ?

ಅಭದ್ರತೆ ಎಲ್ಲಿ

ಕಾಂಗ್ರೆಸ್ ನಾಯಕರುಗಳು ಕೇರಳದಲ್ಲಿ ಅಭದ್ರತೆ ಇದೆ ಎಂದು ಹೇಳುತ್ತಿರುವಾಗ ಕಾಂಗ್ರೆಸ್ ಆಡಳಿತೆ ನಡೆಸುತ್ತಿರುವ ರಾಜ್ಯಗಳಲ್ಲಿ ಸುಭದ್ರತೆ ಇದೆ ಎಂದೆಣಿಸಿರಬೇಕು.

ಮದರಾಸಿನ " ಮೈಲ್ " ಪತ್ರಿಕೆ ಸೆಪ್ಟಂಬರ್ 18ರಂದು ಗುಂಟೂರಿನಿಂದ ಬಂದ ಈ ಕೆಳಕಂಡ ಸುದ್ದಿ ಪ್ರಕಟಿಸಿದೆ:

"ಆಂಧ್ರ ಪ್ರದೇಶದ ಕಾಂಗ್ರೆಸ್ ಅಧ್ಯಕ್ಷ ಶ್ರೀ ಪಿ. ರಂಗಾ ರೆಡ್ಡಿಯವರು ಛೇಂಬರ್ ಆಫ್ ಕಾಮರ್ಸ್ ಭವನದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವಾಗ ಯಾರೋ ಅವರ ಕಿಸೆ ಕತ್ತರಿಸಿದರು.

"ಎ. ಐ. ಸಿ. ಸಿ. ಅಧಿವೇಶನಕ್ಕಾಗಿ ಸಂಗ್ರಹಿತವಾಗಿದ್ದ ರೂ. 1,800 ಅವರ ಕಿಸೆಯಿಂದ ಪಾರಾಯಿತು. ರೆಡ್ಡಿಯವರು ಈ ಕೃತ್ಯ ನಡೆದಾಗ ತಾಲ್ಲೂಕು ಮತ್ತು ಮಂಡಲ ಕಾಂಗ್ರೆಸ್ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತಿದ್ದರು".

ಅಹಿಸಾತ್ಮಕ ಕಿಸೆ ಕತ್ತರಿ ಪ್ರಯೋಗ !

ಪೋಲೀಸು ಪಡೆ ಮಾರಾಟಕ್ಕಿದೆ ?

ಒರಿಸ್ಸಾದ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್‌ರವರು ಟಾಟಾ ಕಂಪೆನಿಯವರಿಗೆ ಪೋಲೀಸುಪಡೆ ಇರಿಸಲು ಹಣ ಕೇಳಿ ಬರೆದಿದ್ದ ಪತ್ರವನ್ನು ಕಮ್ಯೂನಿಸ್ಟ್ ಪಕ್ಷದ ಮುಖ ಪತ್ರವಾದ "ನ್ಯೂ ಏಜ್" ವಾರಪತ್ರಿಕೆ ಪ್ರಕಟಿಸಿದೆ. ಅದರ ಸಾರಾಂಶ ಈ ರೀತಿ ಇದೆ:

(೬ನೇ ಪುಟ ನೋಡಿ)

ಡಿ ಗ್ರಾಮದ ರೈತ
ಕ್ಕಳಷ್ಟು ಮಮತೆ
ರಾಮಣ್ಣ ತೆಂಗ
ಗ, ಅವರಿಗಾದ ಕ
ಮಣ್ಣನನ್ನು ಕರೆಸಿ
ಕಡ್ಡಿ ವಸ್ತ್ರವನ್ನು
ಗೌರವಿಸಿದರು.
'ನಿನ್ನ ಮರದ
ಬೇಕೆಂದು ಆಸೆ !'—
'ಅಗ್ಲಿ ನನ್ನೊ
ಮುಂದೆ ಮಾತನಾ
ರಾಮಣ್ಣ.
ಆದರೆ ಜೋಡಿ
ಲಿಲ್ಲ. ಅವರು ಮ
ಟ್ಟನ ದೊಡ್ಡಿಗೆ ಬರ
ಯೇ ಖಾಹಿಲೆಯಿಂ
ಸಂಗತಿ, ರೈತರ
ತು. ರಾಮಣ್ಣನ
ನ್ನು ವಸೂಲು ಮ
ಸೇರಿಸಿ—ಅವರ
ಹಿಂತಿರುಗಿದನು.
ಮುಂದೆ ಕೆಲ
ಜೋಡಿದಾರರು
ಜೋಡಿದಾರರ
ಬಂದಿತು.
ಕಿರಿಯ ಜೋ
ರಿಕೆಯಲ್ಲಿ ಅನುಭ
ಳಲಾಗದು ! ಜೋ
ರೂ ತನ್ನವರೆಂಬ
ಭಾವ—ಅವರದು.
ಸ್ವ'ವೆಂಬುದೇನಾ
ಮೇಲೆಯೂ ತನ
ಉತ್ತಿದ್ದರು—ಅವ
ಗ್ರಾಮದ ರೈತ
ಯೂ ತಮಗೆ
ಅವರ ನಂಬಿಕೆ.
ಹೊಸ ಜೋಡಿ
ಡ್ಡಿಗೆ ಬರುವಾಗ,
ಕ್ಕೆಯಾಳಾದ ಬಸ
ತರುವುದು ರೂಢಿ.
ಬಸವಣ್ಣ ಜ
ದಾರರೆ, ಒಂದೇ
ದ ಶಿಖರ'ವೆನ್ನು
'ಊರ ಬಸವ'
ವಾಗುತ್ತದೆ.
ಯಾರ ಹೊಲದಲ್ಲಿ
ಳು ಮಾಡಿದರೂ,
ಲ್ಲ. ಅಂತೆಯೇ
ಪುಟ್ಟನ ದೊಡ್ಡಿಯ
ನೆಂದು ಕರೆಯ
ಜೋಡಿದಾರ
ಕಿರುಕುಳವಾದರೆ,
ಬಗೆಯ ಕಿರುಕುಳ
ಒಂದೆರಡು ಹಿಂಸೆ
ರ್ಥಕ್ಕಾಗಿ ಹಲವ
ಡುತ್ತಿದ್ದನು.
ಬಸವಣ್ಣನ
ಳು, ಜೋಡಿದಾರ
ಕಿರಿಯ ಜೋಡಿದ
ಬಂಟನನ್ನು ಏನ
ದ್ದರು.
ನೂರು ಬಾಳೆ
ರಿಯ ಜೋಡಿದಾ

ದುಡಿಮೆ!

ಧಾಟಿ: "ಕವಾಲಿ ಹಾಡು"

ಸುರಿಯುತಿದೆ ಬೆವರು
ಉರಿಯುತಿದೆ ಬಸಿರು
ದುಡಿವುದೇತಕಾಗಿ ?
ಹಗಲಿರುಳು ಮೈಮುರಿದು !
ಓ........ಬೆವರಿಳಿಸಿ ಬೆಳೆಸುವೆವು ರಾಶಿ ಧಾನ್ಯ !
ತನು ಸವೆದು ಹಸಿದಾಗ ಉದರಕ್ಕೆ ಶೂನ್ಯ !
ಇಂತಿರೆ, ಈ ಮನೆ ಮುರುಕ ನೀತಿ ಯಾರಿಗೆ ಮಾನ್ಯ !
ದುಡಿತದ ಫಲವೆಲ್ಲಾ !
ಹೊಲದೊಡೆಯನಿಂದಲ್ಲಾ !
ಉತ್ತು ಬಿತ್ತಿ ಹೊತ್ತು
ಬೆವರಿಳಿಸಿದವನ ಸೊತ್ತು !
ಓ........ನೇಯುವೆವು ನಾವು ಸಾಸಿರ ಗಜ ಬಟ್ಟೆ !
ಉಡೆಲೆಮಗಿಲ್ಲ ಅರೆಗಜ ಬಟ್ಟೆ !
ಹೀಗಾದೊಡೆ, ದುಡಿವ ಜನರಿಗೆ ಸುಖ ಬಾಳ್ವೆಯುಂಟೇ ?
ನಾವೆಲ್ಲ ದುಡಿದ ಫಲವ,
ಬಲದಿ ಸುಲಿದು ಮೆಲುವ,
ನ್ಯಾಯ ನೀತಿ ಕಳೆವ
ಸೋಮಾರಿ ಜನಗಳವರು !
ಓ........ಸುಂದರ ಮಹಡಿಯ ಮನೆ ಹಲವರಿಗೆ !
ಅಂದದ ಜೀವನ, ಮೃಷ್ಟಾನ ಭೋಜನ ಕೆಲವರಿಗೆ
ಇಂತು, ಬಡತನದ ಬಾಳು, ಮುರುಕು ಮನೆ ದುಡಿಮೆಗಾರರಿಗೆ !
ವಸನ ವಸತಿಗಳೆಲ್ಲಾ,
ಕೆಲಜನಕೆ ನೆಲಫಲವೆಲ್ಲಾ,
ದುಡಿದುಂಬವರಿಗೆಲ್ಲೇನು ?
ಬಡತನದ ಬಾಳ್ ಸಾಕಿನ್ನು !
ಓ........ಒಗ್ಗೂಡಿದ ಶ್ರಮ ನಿರ್ಮಾಣದ ಸಂಪತ್ತು !
ಅದರೊಡೆತನ ಜನತೆಗೆ ಸಲಬೇಕಿತ್ತು !
ಆ ರಾಜ್ಯಕೆ, ಮುನ್ನಡೆಯುವ ಬನ್ನಿರಿ ಈ ಹೊತ್ತು !
ಶ್ರಮರಾಜ್ಯಕಿಂದೆ ನಡೆವ
ಜನರ ಸುಲಿಗೆ ತಡೆವ !
ಹೊಸ ಬಾಳ ನಾವು ಕಾಣ್ವ !
ಜತೆಗೂಡಿ ದುಡಿದು ಬಾಳ್ವ !

—"ಶ್ರಮಿಕ" ಮಂಗಳೂರು

"ಮೇಯರುಗಳ ಅಧಿಕಾರಾವಧಿ ಒಂದು ವರ್ಷ ಇರುವುದರಿಂದ ಯಾವ ಕಾರ್ಯವೂ ಸರಿಯಾಗಿ ಆಗುವುದು ಕಷ್ಟ. ಅಧಿಕಾರಾವಧಿಯನ್ನು ಇನ್ನೂ ಹೆಚ್ಚಿಸಬೇಕು" ಎಂದು ಮಾಜಿ ಮುಖ್ಯ ಮಂತ್ರಿ ಹನುಮಂತಯ್ಯನವರು ಮೊನ್ನೆ ಒಂದು ಕಡೆ ಭಾಷಣ ಮಾಡುತ್ತಾ ಸೂಚಿಸುತ್ತಿದ್ದಾರೆ.

o o o

ವರುಷವಿದ್ದರೂ ಅಷ್ಟೇ ಹತ್ತು ವರ್ಷವಿದ್ದರೂ ಅಷ್ಟೆ ಎಂದು ತಿಳಿದವರೊಬ್ಬರು ಹೇಳುತ್ತಿದ್ದಾರೆ. ಅಧಿಕಾರದ ಕಾಲಾವಧಿಯನ್ನು ಹೆಚ್ಚಿಸಿದಲ್ಲಿ ನಗರ ನಿರ್ಮಲೀಕರಣಕ್ಕೆ ಬದಲು ನಗರ ನಿರ್ಮೂಲೀಕರಣ. —ಅರ್ಥಾತ್ ಮೇಯರ್‌ರ ನಿರ್ಮೂಲನ — ವೇ ಹೆಚ್ಚಾಗಿ ಆದೀತೆಂದು ಬಲ್ಲವರ ಟೀಕೆ.

o o o

ಬೆಂಗಳೂರು ನಗರದಲ್ಲಿ ಬಿ.ಟಿ.ಎಸ್. ಬಸ್ಸುಗಳು ಇನ್ನು ಮೇಲೆ ಘಂಟೆಗೆ ೧೦ ಮೈಲಿ ವೇಗಕ್ಕಿಂತ ಹೆಚ್ಚು ವೇಗದಲ್ಲಿ ಚಲಿಸಲಾರದೆಂದು ಸುಗ್ರೀವಾಜ್ಞೆ ಹೊರಡಿಸಲಾಗಿದೆ.

o o o

ಈ ಆಜ್ಞೆಯಿಂದ ನಗರದಲ್ಲಿ ಆಗುತ್ತಿರುವ ದುರ್ಘಟನೆಗಳನ್ನು ತಪ್ಪಿಸಲು ಸಾಧ್ಯವಾಗುತ್ತದೆ ಎಂದು ಪೋಲೀಸು ಅಧಿಕಾರಿಗಳ ವಾದ.

ಅದು ಏನೇ ಇರಲಿ ಈ ಆಜ್ಞೆ ತೂಕಡಿಸುತ್ತಿದ್ದವನಿಗೆ ಹಾಸಿಗೆ ಹಾಸಿ ಕೊಟ್ಟಂತಾಗಿದೆ. ಬಸ್‌ಗಾಗಿ ಘಂಟೆಗಟ್ಟಲೆ ಕಾಯಬೇಕಾಗಿದ್ದ ಸಾರ್ವನಿಕರು ಇನ್ನು ಮೇಲೆ ದಿನಗಟ್ಟಲೆ ಕಾಯಬೇಕಾಗಿದೆ ಅಷ್ಟೆ.

o o o

ಬಿ. ಟಿ. ಎಸ್. ನಂಬಿಕೊಂಡು ಈ ವರೆಗೆ ಕಛೇರಿ, ಶಾಲೆ ಮತ್ತು ಇತರ ಕಡೆಗಳಿಗೆ ಹೋಗುತ್ತಿದ್ದ ಪ್ರಯಾಣಿಕರು ಇನ್ನು ಮುಂದೆ ಎರಡು ಘಂಟೆ ಮುಂಚಿತವಾಗಿ ಹೊರಟು ಬಸ್‌ಸ್ಟಾಪ್‌ಗಳಲ್ಲಿ ಟಿಕಾಣಿ ಹಾಕಬೇಕಾಗಿ ವಿನಂತಿ.

o o o

ಈ ಬಾರಿ ಲೋಕ ಸಭಾಧಿವೇಶನ ನಡೆಯುತ್ತಿದ್ದಾಗ ಒಂದು ದಿನ ಸಭೆಯಲ್ಲಿ ಕೋರಂ ಇಲ್ಲದೆ ಕಾರ್ಯಕಲಾಪಗಳನ್ನು ಸ್ವಲ್ಪ ಕಾಲ ಮುಂದಕ್ಕೆ ಹಾಕಬೇಕಾಯಿತು. —ಸುದ್ದಿ.

ಇದೇನು ಮಹಾ, ಬೆಂಗಳೂರು ಕಾರ್ಪೊರೇಷನ್ ಸಭೆಯಲ್ಲಿ ಕೋರಂ ಇಲ್ಲದೆ ತಿಂಗಳುಗಟ್ಟಲೆ ಮುಂದುವರಿಯುತ್ತದೆ ಎಂದು ನಗರ ಕಾರ್ಪೊರೇಟರರೊಬ್ಬರ ಹೆಮ್ಮೆ.

o o o

ಮುಖ್ಯ ಮಂತ್ರಿ ಜತ್ತಿಯವರು ಹಠಾತ್ತನೆ ಕೆಲವು ಕಛೇರಿಗಳಿಗೆ ಭೇಟಿಕೊಟ್ಟು, ತನಿಖೆ ನಡೆಸುತ್ತಿದ್ದಾರೆ.

ಕೆಲದಿನದ ಹಿಂದೆ ಮೈಸೂರಿನಿಂದ ಬರುವಾಗ್ಗೆ, ರೋಡ್ ಟ್ರಾನ್ಸ್‌ಪೋರ್ಟ್ ಬಸ್‌ನಲ್ಲಿ ಪೋಲೀಸು ದಫೇದಾರನೊಬ್ಬ ಟಿಕೇಟಿಲ್ಲದೆ ಪ್ರಯಾಣ ಮಾಡುತ್ತಿದ್ದುದನ್ನು ಜತ್ತಿಯವರು ಹಿಡಿದರಂತೆ.

ಹಾಗೆಯೇ ಮೊನ್ನೆ ಬೆಂಗಳೂರಿನ ಮೈಸೂರು ರಸ್ತೆ ಚೌಕದಲ್ಲಿ ಪೋಲೀಸರು ಲಾರಿ ಡ್ರೈವರರೊಬ್ಬನನ್ನು ಪೀಡಿಸುತ್ತಿದ್ದುದನ್ನು ಹಿಡಿದರಂತೆ.

o o o o

ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೇ ಎಂದ ಹಾಗೆ ಜತ್ತಿಯವರು ಸಣ್ಣ ಪುಟ್ಟ ಪೋಲೀಸು ಪ್ಯಾದೆಗಳನ್ನೇ ಈ ವರೆಗೆ ಹಿಡಿದಿದ್ದಾರೆ. ಲಂಚ ರುಷುವತ್ತುಗಳಲ್ಲಿ ಪಂಡಿತರಾಗಿರುವ, ದೊಡ್ಡ ಅಧಿಕಾರಿಗಳ ಗೊಡವೆಗೆ ಹೋಗುವುದು ಜತ್ತಿಯವರಿಂದ ಸಾಧ್ಯವಿಲ್ಲವೆಂದು ಕಾಣುತ್ತದೆ.

o o o o

ಅಂಥವರನ್ನು ಕಾಪಾಡುವುದು ಸರಕಾರದ ಒಂದು ಮುಖ್ಯ ಕಾರ್ಯಗಳಲ್ಲೊಂದು ಅಲ್ಲವೆ.

ಹುರಿಗಾಳು

"ನಿಮ್ಮನ್ನೆಲ್ಲಾ ಡಿಸ್‌ಮಿಸ್ ಮಾಡಿದರೂ ನನಗೆ ಪಾಪ ಬರೋದಿಲ್ಲ. ನಿಮಗೆ ಜನರ ಬಗ್ಗೆ ಸ್ವಲ್ಪವಾದರೂ ಸಹಾನುಭೂತಿಯಿಲ್ಲವೆ? ನಿಮಗೆ ಆತ್ಮ ಸಾಕ್ಷಿಯಿಲ್ಲವೆ. ರೈತರ ತೆರಿಗೆಯಿಂದ ಸಂಬಳ ತಕೊಳ್ತೀರಿ. ಈ ರೀತೀನೇ ಕೆಲಸ ಮಾಡೋದು" ಎಂದು ಮಾನ್ಯ ಕಂದಾಯ ಸಚಿವ ಶ್ರೀ ಕಡಿದಾಳ ಮಂಜಪ್ಪನವರು ರಾಮನಗರದ ತಾಲ್ಲೂಕು ಕಛೇರಿಯ ಅವ್ಯವಸ್ಥೆಯನ್ನು ಕಂಡು ರೇಗಾಡಿದರೆಂದು ಪತ್ರಿಕೆಗಳಲ್ಲಿ ಸುದ್ದಿ ಬಂದಿದೆ.

o o o o

ಅರ್ಜಿ ವಿಲೇವಾರಿಯಲ್ಲಿ ಆಗುತ್ತಿರುವ ನಿಧಾನದ ಕುರಿತು ಸಚಿವರು ಹೀಗೆ ಸಿಟ್ಟಾಗಿ ಹೇಳಿದ ನುಡಿ ಇದು. ಸಿಟ್ಟಿನಲ್ಲಿ ಆಡಿದ್ದು ಮರೆತು ಹೋಗುವುದು ಬಹು ಬೇಗ. ಪಾಪ ಪುಣ್ಯ ಎಲ್ಲಿ ಯಾರು ಕೇಳುತ್ತಾರೆ ಸ್ವಾಮಿ ಈಗ! ಸಿಟ್ಟಿನ ಭರದ ನುಡಿಗಳನ್ನು ಮರೆಯದೇ ತಮ್ಮ 'ಆತ್ಮ ಸಾಕ್ಷಿ'ಯನ್ನೇ ಸ್ವಲ್ಪ ಕೆದಕಿ ನೋಡಿಕೊಳ್ಳುವುದು ವಾಸಿ. ಉಪದೇಶಿಸುವುದು ಸುಲಭ; ಆಚರಿಸುವುದು.........

"ಚೌಚೌವಾಲಾ"

ದ್ದ. ಆದರೆ ರಾಮಣ್ಣನ ಆದರ್ಶ ಜೋಡಿದಾರರು, ಮಣ್ಣಿನೊಡನೆ ಮಣ್ಣಾಗಿ ಹೋಗಿದ್ದರಲ್ಲವೆ ?

ರಾಮಣ್ಣನಿಗೆ ದುರ್ದೆಶೆಯ ದಿವಸಗಳು ಪ್ರಾರಂಭವಾಗತೊಡಗಿದವು. ರಾಮಣ್ಣ ಆಗ ಚಿನ್ನದ ಪುತ್ಥಳಿಯಂತ ಗಂಡು ಮಗುವೊಂದರ ತಂದೆಯಾಗಿದ್ದ.

ಆತ ಈ ವರ್ಷ ನಾಲ್ಕಂಕಣದ ಮನೆಯನ್ನು ಕಟ್ಟಿಸುವ ಸನ್ನಾಹದಲ್ಲಿದ್ದ. ತನ್ನ ಭೂಮಿಯಲ್ಲಿಯೇ ಮನೆಗೆ ಸಾಕಾಗುವಷ್ಟು ಮರಮುಟ್ಟುಗಳನ್ನೊದಗಿಸಲು, ಬೇವು ಮತ್ತು ಗೊಬ್ಬಳಿ ಮರಗಳನ್ನು ಬೆಳೆಸಿಟ್ಟಿದ್ದನು.

ಇದ್ದಕ್ಕಿದ್ದಂತೆ ನಡೆದ ದುರ್ಘಟನೆಗಳಿಂದಾಗಿ, ರಾಮಣ್ಣನ ಹೃದಯಕ್ಕೆ ವಜ್ರಾಘಾತವಾಯಿತು. ಆತನ ಹೆಂಡತಿ ಮುದ್ದುಮಗುವನ್ನು ಆತನಿಗೊಪ್ಪಿಸಿ, ಹತ್ತಾರು ದಿನದ ಜ್ವರದ ಕಾರಣದಿಂದಲೇ ಮೃತಳಾದಳು. ಆತನ ಸ್ಥಿತಿಗಾಗಿ ಊರಿಗೆ ಊರೇ ಮರುಗಿತು.

ತನ್ನ ಹೃದಯಕ್ಕಾದ ನೋವಿನ ಪರಿಣಾಮವಾಗಿ, ರಾಮಣ್ಣ ಕೆಲವಾರು ದಿವಸಗಳ ವರೆಗೆ ಹಾಸಿಗೆ ಹಿಡಿದನು. ತನ್ನ ಮಗುವಿನ ಪಾಲನೆ ತನಗೆ ಭಾರವೆಂದು ಕಂಡಾಗ ಅದನ್ನು ತನ್ನ ಮಾವ-ಅತ್ತೆಯರಿಗೊಪ್ಪಿಸಿ, ನಿರ್ಜೀವ ವಸ್ತುವಿನಂತೆ, ಹೊಲದ ಕಡೆ ಅಡ್ಡಾಡಿ ಬಂದನು.

ತಾನು ಮನೆ ಕಟ್ಟಲೆಂದು ಬೆಳೆಸಿದ್ದ ಗೊಬ್ಬಳಿ ಮರಗಳು ಉರುಳಿ ಬಿದ್ದಿದ್ದವು. ಹತ್ತಾರು ಕೂಲಿಯಾಳುಗಳು ಮರ ಕಡಿಯುವುದರಲ್ಲಿ ತೊಡಗಿದ್ದರು. ರಾಮಣ್ಣನ ಪಾಲಿಗೆ ತನ್ನ ಹೃದಯವನ್ನೇ ಯಾರೋ ಕೊಡಲಿಯಿಂದ ಕತ್ತರಿಸುತ್ತಿರುವಂತೆ ಭಾಸವಾಯಿತು. ಆವೇಶ ಉಕ್ಕಿ ಬಂದಿತು. ಮರ ಕಡಿಯುತ್ತಿದ್ದ ಆಳುಗಳ ಮೇಲೆ ಬಿದ್ದನು.

ಆತನಿಗೆ ಪ್ರಜ್ಞೆ ಬಂದಾಗ, ತಾನು ಪೋಲಿಸರ ವಶದಲ್ಲಿದ್ದುದು ತಿಳಿಯಿತು. ಜೋಡಿದಾರರ ಸಿಬ್ಬಂದಿಗಳ ಮೇಲೆ ಕೈಮಾಡಿದುದಕ್ಕಾಗಿ ಆತ ಬಂಧಿಸಲ್ಪಟ್ಟಿದ್ದನು. ಆದರೆ ಜೋಡಿದಾರರ ಸಿಬ್ಬಂದಿಗಳಾದ, ಆ ಹೃದಯವಿಲ್ಲದ ಕ್ರೂರ ಜಂತುಗಳು ರಾಮಣ್ಣನ ತಲೆಯೊಡೆದಿದ್ದರು !

ಮೂರು ನಾಲ್ಕು ತಿಂಗಳ ನಂತರ ಆತ ಆಸ್ಪತ್ರೆಯಿಂದ ಹೊರಬರುವಾಗ, 'ಇನ್ನು ಜೋಡಿದಾರರ ಮೇಲೆ ಅಥವಾ ಅವರ ಆಳುಕಾಳುಗಳ ಮೇಲೆ ಕೈಮಾಡಲು ಹೋಗಬಾರದೆಂದೂ; ಜೋಡಿ ಗ್ರಾಮದಲ್ಲಿನ ಪ್ರತಿಯೊಂದು ವಸ್ತುಗಳೂ, ಜೋಡಿದಾರರಿಗೆ ಸೇರಬೇಕಾಗಿರುವುದರಿಂದ, ನಿನ್ನವೆಂದು ಹೇಳಲಾದ ಆ ಮರಗಳನ್ನು ಕಡಿದುಹಾಕಲು ಅವರಿಗೂ ಹಕ್ಕಿದೆಯೆಂದೂ'-ಪೋಲೀಸಿನವರು ಬುದ್ಧಿ ಹೇಳಿ ಕಳುಹಿಸಿದರು.

ಮೇಲಿನ ಘಟನೆಗಳಿಂದ ಜರ್ಝರಿತವಾದ ಆತನ ನಿಸ್ಸಹಾಯಕ ಮನಸ್ಸಿಗೆ ಸಮಾಧಾನವಾಗಲೆಂದು ತನ್ನ ಬಾಳೆಯ ತೋಟದತ್ತ ನಡೆದನು. ಆದರೆ-ಆದರೆ! ತಾನು ತನ್ನದೆಂದು ನೆಟ್ಟು ಬೆಳೆಸಿದ್ದ ತೋಟ ಹಾಳುಬಿದ್ದ ವನದಂತಾಗಿತ್ತು. ಗೊನೆ ಕಡಿಯಲ್ಪಟ್ಟಿದ್ದ ಮೋಟು ಬಾಳೆಯ ಗಿಡ, ರಾಮಣ್ಣನನ್ನು ನೋಡಿ, ಕಣ್ಣೀರಿಟ್ಟವು.

ರಾಮಣ್ಣ ಆಸ್ಪತ್ರೆಯಲ್ಲಿದ್ದ ಮೂರು

(೮ನೇ ಪುಟ ನೋಡಿ)

ಆಹಾರ ಪರಿಸ್ಥಿತಿ — ನಿಜಾಂಶವೇನು?

ಆಹಾರ ಪರಿಸ್ಥಿತಿ ತೃಪ್ತಿಕರವಾಗಿಲ್ಲದಿದ್ದರೂ, ಆನ್ನೇನೂ ಕೇಡಾಗಿಲ್ಲ. ಬಹುಬೇಗ ಪರಿಸ್ಥಿತಿ ಉತ್ತಮಗೊಳ್ಳುವುದು. ಇದರಿಂದ ಗಾಬರಿಪಟ್ಟುಕೊಳ್ಳುವ ಅಗತ್ಯ ಇಲ್ಲ ಎಂದು ಬೇಕಾದಷ್ಟು ಆಶ್ವಾಸನೆಗಳನ್ನು ಆಹಾರ ಸಚಿವರು ಕೊಡುತ್ತಾ ಇದ್ದಾರೆ.

ಕೆಲವು ವರ್ಷಗಳ ಹಿಂದೆ ಪ್ರಧಾನಿ ನೆಹರೂರವರು ಭಾರತವು ಆಹಾರದ ಆಮದನ್ನು ಸ್ವಲ್ಪ ಕಾಲದಲ್ಲೇ ಸಂಪೂರ್ಣವಾಗಿ ನಿಲ್ಲಿಸುವುದು ಎಂದು ಆಶಾವಾದಿಯಾಗಿ ನುಡಿದಿದ್ದರು.

ಮಾಜಿ ಆಹಾರ ಉಪ ಸಚಿವ ಎಂ. ವಿ. ಕೃಷ್ಣಪ್ಪನವರು, ಭಾರತ ಈಗಾಗಲೇ ಆಹಾರ ಧಾನ್ಯಗಳನ್ನು ರಫ್ತು ಮಾಡಲಾರಂಭಿಸಿದೆ ಎನ್ನುವಷ್ಟು ದೂರ ಸಾಗಿದ್ದರು.

ಈ ರೀತಿ ಹೇಳಿಕೆಗಳ ಮೂಲಕ ಜನರ ಕಣ್ಣೊರೆಸಲು ಯತ್ನಿಸಿದರೂ ಸತ್ಯನಿಜಾಂಶ ಬೇರೆಯಾಗಿದೆ ಎಂಬುದು ಅಂಕಿ ಅಂಶಗಳನ್ನು ಗಮನಿಸಿದಲ್ಲಿ ಗೊತ್ತಾಗುತ್ತದೆ.

ಜನಸಂಖ್ಯೆ ಒಂದೆಡೆ ಹೆಚ್ಚುತ್ತಿದ್ದರೆ, ಇನ್ನೊಂದೆಡೆ ಆಹಾರ ಧಾನ್ಯಗಳ ಉತ್ಪಾದನೆ ಕಮ್ಮಿಯಾಗುತ್ತಿದೆ ಎಂಬುದು ಗೋಚರವಾಗುತ್ತದೆ. ನಮ್ಮ ಜನಸಂಖ್ಯೆಯು ವರ್ಷಕ್ಕೆ ಶೇ. 1·5ರಷ್ಟು ಹೆಚ್ಚುತ್ತಿದೆ. 1956—57ರಲ್ಲಿ ಅಂದಾಜು ಮಾಡಲಾಗಿದ್ದ ಜನಸಂಖ್ಯೆಯು 392 4 ಮಿಲಿಯ ಆಗಿತ್ತು. ಅಂದರೆ 1952ಕ್ಕಿಂತ 20 ಮಿಲಿಯ ಹೆಚ್ಚಾಗಿತ್ತು. ಆದರೆ ನಮ್ಮ ಆಹಾರ ಉತ್ಪಾದನೆ ಈ ಕೆಳಕಂಡಂತಿದೆ:

ಆಹಾರ ಧಾನ್ಯ ಉತ್ಪಾದನೆ (ಲಕ್ಷ ಟನ್‌ಗಳಲ್ಲಿ)

ವರ್ಷ	ಧಾನ್ಯಗಳು	ಕಾಳುಗಳು	ಒಟ್ಟು
1952—53	492·2	90·4	582·7
1933—54	582·7	104·5	687·2
1954—55	561·8	107·8	669·6
1955—56	549·2	108·7	657·9
1956—57	572·5	115·0	687·5
1957—58	528·1	92·2	620·3

(ಆಹಾರ ಪರಿಸ್ಥಿತಿ ಬಗ್ಗೆ ವಿಶೇಷ ಪ್ರಕಟಣೆಯಿಂದ, ಆಗಸ್ಟ್ 1958)

ಶ್ರೀ ಜೈನ್‌ರವರೇನೋ ಪರಿಸ್ಥಿತಿ ಹತೋಟಿಯಲ್ಲಿದೆ ಎಂದು ಹೇಳುತ್ತಿದ್ದಾರೆ. ರಾಜ್ಯ ಹಾಗೂ ಕೇಂದ್ರ ಸರಕಾರದ ಬಳಿ 14 ಲಕ್ಷ ಟನ್ ಆಹಾರ ಧಾನ್ಯಗಳ ದಾಸ್ತಾನಿರುವುದರಿಂದ ಪರಿಸ್ಥಿತಿ ಹತೋಟಿಯಲ್ಲಿದೆಯೆಂದು ಹೇಳುತ್ತಿದ್ದಾರೆ. ಆದರೆ ನಿಜವಾಗಿ ಜೋತಾ ಇರುವ 67 ಲಕ್ಷ ಟನ್ನುಗಳನ್ನು ಈ ಅಲ್ಪ ದಾಸ್ತಾನಿನಿಂದ ಪರಿಹರಿಸಲು ಸಾಧ್ಯವೆ?

ಇನ್ನು ನಮ್ಮ ದೇಶವು ಆಮದು ಮಾಡಿಕೊಳ್ಳುತ್ತಿರುವ ಆಹಾರ ಧಾನ್ಯದ ಪ್ರಮಾಣವನ್ನು ನೋಡೋಣ. ಇದು ಕಡಿಮೆಯಾಗುತ್ತಿದೆಯೇ ಹೆಚ್ಚುತ್ತಿದೆಯೇ ಎಂಬುದು ಗೊತ್ತಾಗುತ್ತದೆ. ಆಹಾರ ಧಾನ್ಯಗಳ ಆಮದಿನಿಂದಾಗಿ ವಿದೇಶೀ ವಿನಿಮಯ ಹೆಚ್ಚು ವ್ಯಯವಾಗುತ್ತಿರುವುದರಿಂದ, ಅನೇಕ ಅಭಿವೃದ್ಧಿ ಯೋಜನೆಗಳಿಗೆ ಬಾಧಕವಾಗಿದೆ ಎಂಬುದು ಸರ್ವವಿಧಿತವಾಗಿದೆ. ಈ ಕೆಳಗಿನ ಅಂಕಿ ಅಂಶಗಳು ಪರಿಸ್ಥಿತಿಯನ್ನು ಸೂಚಿಸುತ್ತದೆ:

ಆಹಾರ ಧಾನ್ಯಗಳ ಆಮದು

ವರ್ಷ	ಟನ್‌ಗಳಲ್ಲಿ
1953	2,003,000
1954	808,000
1955	700,000
1956	1,420,000
1957	3,582,000
1958 (ಮೊದಲ ಅರ್ಧ ವರ್ಷದಲ್ಲಿ)	1,862,000

ಆಹಾರ ಧಾನ್ಯಗಳ ಉತ್ಪಾದನೆಯು ಕಡಿಮೆಯಾದುದೇ ಈ ಹೇರಳವಾದ ಆಮದಿಗೆ ಕಾರಣವಾಗಿದೆ.

ಉತ್ಪಾದನೆ ಪರಿಸ್ಥಿತಿಯು ಒಂದೆಡೆ ಹೀಗಿದ್ದರೆ ಇನ್ನೊಂದೆಡೆ ಬೆಲೆ ವಿಪರೀತವಾಗಿ ಏರುತ್ತಿದೆ. ಇದು ಎಲ್ಲರಿಗೂ ತಿಳಿದಿರುವ ಅಂಶವಾಗಿದೆ. ದಿನೇದಿನೇ ಬೆಲೆ ಏರುತ್ತಲೇ ಇದೆ. 1952—53ನೆ ಸಾಲಿನಲ್ಲಿ ಆಹಾರ ಧಾನ್ಯಗಳ ಒಟ್ಟು ವ್ಯಾಪಾರದ ಸಂಖ್ಯೆಯನ್ನು 100 ಎಂದು ತೆಗೆದುಕೊಂಡಲ್ಲಿ 1956ರ ನವೆಂಬರ್ ತಿಂಗಳಲ್ಲಿಯೂ ಅದು 100 ಆಗಿತ್ತು. 1957ರ ಆಗಸ್ಟ್ ತಿಂಗಳ ಹೊತ್ತಿಗೆ ಅದು 106ಕ್ಕೇರಿತು. ಆದರೆ ಇಂದು 1958ರ ಆಗಸ್ಟ್ ಮಾಸದಲ್ಲಿ ಆ ಸಂಖ್ಯೆ 117 ಆಗಿದೆ. ಆದರೂ ಸರಕಾರ ಬೆಲೆ ಏರಿಕೆಯನ್ನು ತಡೆಹಿಡಿಯಲಾಗಿದೆ ಎಂದು ಹೇಳುತ್ತಿದೆ. ಜನತೆಯನ್ನು ಮೋಸಗೊಳಿಸಲು ಬೇಕಾದ್ದು ಹೇಳಿದರೂ ಅಂಕಿ ಅಂಶಗಳನ್ನು ಮೋಸಗೊಳಿಸಲಾದೀತೆ?

——

ಕೇರಳ ....

(೩ನೇ ಪುಟದಿಂದ)

ಇಷ್ಟೊಂದು ಕೈಗಾರಿಕಾ ವಿವಾದವನ್ನು ಇತ್ಯರ್ಥಗೊಳಿಸಿರುವುದು ಕೇರಳ ಸರಕಾರವು ಅನುಸರಿಸುತ್ತಿರುವ ಪುರೋಗಾಮಿ ಕಾರ್ಮಿಕ ನೀತಿಗೆ ನಿದರ್ಶನವಾಗಿದೆ.

ಆರೂಕಾಲರಂತೆ ಬೋನಸ್

ಕೇರಳದ ಪಿಲೋನಿನಲ್ಲಿರುವ ಸುಮಾರು 120 ಗೇರುಬೀಜ ಕಾರ್ಖಾನೆಗಳ 60,000 ಕಾರ್ಮಿಕರು ತಮ್ಮ ಒಟ್ಟು ಸಂಬಳದ 6½ರಷ್ಟು ಬೋನಸ್ಸನ್ನು ಈ ವರುಷ ಪಡೆಯುತ್ತಾರೆ.

ಕಮ್ಯೂನಿಸ್ಟ್ ಪಾರ್ಟಿ ಸಭೆಗಳು

ಬನಹಟ್ಟಿ

ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಬಿ. ವಿ. ಕಕ್ಕಿಲ್ಲಾಯರು ತಾ. 17—9—58ಕ್ಕೆ ಬನಹಟ್ಟಿಯಲ್ಲಿ ಸೇರಿದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ಡಾ. ಬಾಣಕಾರರು ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಮ್ಯೂನಿಸ್ಟ್ ಮುಖಂಡರಾದ ಎನ್. ಕೆ. ಉಪಾಧ್ಯಾಯರು ಭಾಷಣ ಮಾಡಿದರು. ನೇಕಾರರ ಪರಿಸ್ಥಿತಿ ಸುಧಾರಣೆಯಾಗಬೇಕಾದರೆ, ರೈತರ ಮತ್ತು ಸಾರ್ವಜನಿಕರ ಜೀವನಮಟ್ಟ ಏರಬೇಕೆಂದೂ, ರೈತರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಬೇಕಾದರೆ, ಯೋಗ್ಯ ಭೂಸುಧಾರಣೆಯಾಗುವುದಗತ್ಯವೆಂದೂ ಹೇಳಿದರು. ಖಾದಿ-ಗ್ರಾಮೋದ್ಯೋಗದ ಸಲುವಾಗಿ ಕೇಂದ್ರ ಸರಕಾರದವರು ಅಪಾರ ಹಣ ದುರ್ವ್ಯಯ ಮಾಡುತ್ತಿರುವುದನ್ನು ತಡೆಹಿಡಿಯಬೇಕೆಂದೂ, ಕಮ್ಯೂನಿಸ್ಟರ ಆಳಿಕೆಯಲ್ಲಿರುವ ಕೇರಳ ಸರಕಾರ ಯಾವ ರೀತಿಯಲ್ಲಿ ಆಡಳಿತೆ ನಡೆಸುತ್ತಿದೆಂಬುದನ್ನೂ ಭಾಷಣಕಾರರು ವಿವರಿಸಿ ಹೇಳಿದರು.

ಜಮುಖಂಡಿ

“ಕಮ್ಯೂನಿಸ್ಟರೆಂದರೆ, ಕಾಂಗ್ರೆಸ್ಸಿನವರು ಪ್ರಚಾರ ಮಾಡುವಂತೆ, ರಾಕ್ಷಸರಲ್ಲವೆಂದೂ, ಒಂದು ನಿಶ್ಚಿತ ಧೋರಣೆ ಮತ್ತು ಕಾರ್ಯಕ್ರಮಕ್ಕನುಸಾರವಾಗಿ, ದೇಶದ ಮತ್ತು ಜನತೆಯ ಅಭಿವೃದ್ಧಿ ಸಲುವಾಗಿ ದುಡಿಯುವ ಪಕ್ಷವೆಂದೂ, ಜಗತ್ತಿನಲ್ಲಿ ಎಲ್ಲಾ ಅಡ್ಡಿ-ಆತಂಕಗಳನ್ನು ಬದಿಗೊತ್ತಿ ಕಮ್ಯೂನಿಸ್ಟ್ ಪಾರ್ಟಿ ಮುಂದರಿಯುತ್ತಿರುವುದೇ ಇದಕ್ಕೆ ಸಾಕ್ಷಿಯೆಂದೂ, ಆದಕಾರಣ ಜನರ ಬಡತನ ದೂರಮಾಡಿ, ದೇಶಾಭಿವೃದ್ಧಿಯಾಗಬೇಕೆಂದು ಆಶಿಸುವ ಪ್ರತಿಯೊಬ್ಬರೂ ಕಮ್ಯೂನಿಸ್ಟ್ ತತ್ವವನ್ನರಿತು ಕಮ್ಯೂನಿಸ್ಟ್ ಪಾರ್ಟಿಯಲ್ಲಿ ಸೇರಿರಿ, ಅದನ್ನು ಪ್ರಬಲಗೊಳಿಸಬೇಕೆಂದೂ” ಎನ್.ಕೆ. ಉಪಾಧ್ಯಾಯರು, ಜಮುಖಂಡಿಯಲ್ಲಿ ತಾ. 18—9—58ರಂದು ಸೇರಿದ ಕಮ್ಯೂನಿಸ್ಟ್ ಪಾರ್ಟಿಯ ಜಾಹೀರ ಸಭೆಯಲ್ಲಿ ಜನತೆಗೆ ಕರೆಯಿತ್ತರು. ಕರ್ನಾಟಕ ಕಮ್ಯೂನಿಸ್ಟ್ ಮುಖಂಡರಾದ ಬಿ. ವಿ ಕಕ್ಕಿಲ್ಲಾಯರು, ಕೇರಳ ಸರಕಾರದ ವಿರುದ್ಧ ಕಾಂಗ್ರೆಸ್ಸಿನ ಮುಖಂಡರು ಸತತವಾಗಿ ನಡೆಸುತ್ತಿರುವ ಅಪಪ್ರಚಾರಕ್ಕೆ ಉದಾರಣೆ ಸಹಿತ ಉತ್ತರಿಸಿದರು. ಜನರೇ ಇದರ ಸತ್ಯತೆಯನ್ನು ತಿಳಿದುಕೊಳ್ಳಬೇಕೆಂದು ಹೇಳಿದರು. ಜಮುಖಂಡಿಯ ಶ್ರೀ ಮಹಾಂತಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಬಿಜಾಪುರ

ತಾ. 19—9—58ರಂದು ಬಾಲಸಿಂಗ ಮಾಸ್ತರರ ಅಧ್ಯಕ್ಷತೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಪರವಾಗಿ ಸಾರ್ವಜನಿಕ

(೯ನೇ ಪುಟ ನೋಡಿ)

ನೀವೇನು ಹೇಳುತ್ತೀರಿ?

(೪ನೇ ಪುಟದಿಂದ)

ಪತ್ರದ ನಂ. 4485/E, ತಾರೀಕು 7—8—58 ಡಿ. ಎಸ್. ಪಿ., ಡಿ. ಎಂ. ಮಿಶ್ರಾರವರಿಂದ.

ಟಿಸ್ಕೋ ಏಜಂಟ್ ಎಸ್.ಎಂ. ಧಾರ್ ಇವರಿಗೆ—

ತಾ. 23—6—58ರಂದು ಬಾರ್ಬಿಲ್‌ನಲ್ಲಿ ಗಣಿ ಮಾಲಿಕರ ಸಭೆ ನಡೆಯಿತು, ನಾನು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರು ಹಾಜರಿದ್ದೆವು. ಕೆಂಜ್ಞಾರ್ ಮತ್ತು ಸುಂದರಘರ್ ಜಿಲ್ಲೆಗಳಲ್ಲಿರುವ ಗಣಿಗಳಲ್ಲಿ ಕಾರ್ಮಿಕರ ತೊಂದರೆ ಇರುವುದನ್ನು ಎಲ್ಲರೂ ಒಪ್ಪಿದರು. ಬಾರ್ಬಿಲ್‌ನಲ್ಲಿ ಸಶಸ್ತ್ರ ಪೋಲೀಸು ಪಡೆ ಇರಿಸುವುದು ಅತ್ಯಗತ್ಯ. ಇದರಿಂದ ಎಂಥ ಪರಿಸ್ಥಿತಿಯನ್ನಾದರೂ ಕೂಡಲೇ ಎದುರಿಸಬಹುದು. ಕಳೆದೆರಡು ತಿಂಗಳಿಂದ ಈ ಗಣಿಗಳಲ್ಲಿ ಕಾರ್ಮಿಕರ ತೊಂದರೆಯಿಂದಾಗಿ ಒರಿಸ್ಸಾ ಮಿಲಿಟರಿ ಪೋಲೀಸನ್ನು ಬಾರ್ಬಿಲ್‌ನಲ್ಲಿ ತಂದಿರಿಸಲೇಬೇಕಾಗಿದೆ.

ಸರಕಾರಕ್ಕೆ ಶಾಶ್ವತವಾದ ಪಡೆ ಇರಿಸುವ ಸೂಚನೆ ಮಾಡಿದ್ದರೂ ಹಣದ ಮುಗ್ಗಟ್ಟಿನಿಂದಾಗಿ ಅದಕ್ಕೆ ಗಮನ ಕೊಡುವುದಾಗಲಿಲ್ಲ. ಆದ್ದರಿಂದಾಗಿ ಗಣಿ ಮಾಲಿಕರು ಮುಂದೆ ಬಂದು ಸಹಾಯ ನೀಡಿದಲ್ಲಿ ಒಂದು ಪಡೆಯನ್ನು ಸಿದ್ಧಗೊಳಿಸಬಹುದು.

ಇದಕ್ಕೆ ತಗಲುವ ವೆಚ್ಚ ತಿಂಗಳಿಗೆ ರೂ. 3,000 ಆಗುತ್ತದೆ. ಇದನ್ನು ಭರ್ತಿ ಮಾಡಿದಲ್ಲಿ ಸಶಸ್ತ್ರ ಪೋಲೀಸು ಪಡೆ ಸಜ್ಜುಗೊಳಿಸಲು ಸರಕಾರವನ್ನು ಒಪ್ಪಿಸಬಹುದು: ಕೈಗಾರಿಕೋದ್ಯಮಿಗಳ ಉದಾರತೆಯಿಂದ ಕೂಡಲೇ ಜಮಾವಣೆ ಕಾರ್ಯ ಆರಂಭಿಸಬಹುದು. ಈ ಸಲಹೆಯನ್ನು ಎಲ್ಲ ಗಣಿ ಮಾಲಿಕರೂ ಒಪ್ಪಿದ್ದಾರೆ. ಈಗಾಗಲೇ ಕೆಲವರು ಹಣ ಕೊಡಲು ಮುಂದೆ ಬಂದಿದ್ದಾರೆ. ಬರ್ಡ್ ಎಂಡ್ ಕಂಪೆನಿ ತಿಂಗಳಿಗೆ 1,000 ರೂ. ಮತ್ತು ಉಚಿತ ವಸತಿ. ಅದೇ ರೀತಿ ಬಿ. ಓ. ಪಾಟ್ನಾಯಕ್ ಎಂಡ್ ಕಂಪೆನಿ ತಿಂಗಳಿಗೆ 300 ರೂ. ಮತ್ತು ಸೆರಾಜುದ್ದೀನ್ ಎಂಡ್ ಕಂಪೆನಿ ತಿಂಗಳಿಗೆ 500 ರೂ. ಹೀಗೆ ಕೊಡಲು ಒಪ್ಪಿದ್ದಾರೆ.

ಇನ್ನೂ ಬಾಕಿ ಇರುವುದು 1,200 ರೂ. ಸಣ್ಣ ಪುಟ್ಟ ಗಣಿ ಮಾಲಿಕರಿಂದ ಇದನ್ನು ಪಡೆಯುವುದು ಉಪಯೋಗವೂ ಇಲ್ಲ ಮತ್ತು ತೊಂದರೆಯೂ ಆಗುತ್ತದೆ. ಆದ್ದರಿಂದ ನೀವು ಈ 1,200 ರೂ. ಭರ್ತಿ ಮಾಡಬೇಕೆಂದು ಕೋರುತ್ತೇನೆ. ಕೊನೆಯ ಪಕ್ಷ 1,000 ರೂ. ಅದರೂ ಸರಿ. ಇನ್ನು 200 ರೂ. ಹೇಗಾದರೂ ಮಾಡಬಹುದು. ಸದ್ಯದಲ್ಲಿ ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಬಳಿ ತೊಂದರೆ ಇಲ್ಲ. ಆದರೆ ನಿಮಗೆ ತಿಳಿದಿರುವಂತೆ ಕಮ್ಯೂನಿಸ್ಟರು ಕಾರ್ಮಿಕರ ನಡುವೆ ಪ್ರವೇಶಿಸಲು ತೀವ್ರ ಯತ್ನ ನಡೆಸುತ್ತಿದ್ದಾರೆ. ಈಗಿನಿಂದಲೇ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಜಮ್‌ಷೆಡ್‌ಪುರದಲ್ಲಿ ಅದಂತೆ ಆದೀತು. ಹದಿನೈದು ದಿನಗಳಲ್ಲಿ ಜವಾಬೀಯರ್ಬೇಕಾಗಿ ವಿನಂತಿ.

ಇದಕ್ಕೆ ನೀವೇನು ಹೇಳುತ್ತೀರಿ?

—ಪ್ರಶ್ನಾರ್ಥಿ

ಮಂಗಳೂರು

ಗೇಣಿ ನಿರ್ಣಯ-ರೈತರಿಗೆ ವಿಜಯ

ಮದರಾಸು ನ್ಯಾಯ ಗೇಣಿ ನಿರ್ಣಯ ಕಾಯಿದೆಯು ದ. ಕ. ಜಿಲ್ಲೆಗೆ ಅನ್ವಯಿಸುವ ಕಾನೂನು. ಈ ಕಾನೂನಿನಂತೆ ಉತ್ಪತ್ತಿಯ ಶೇಕಡ 40 ಗೇಣಿಯಾಗಬೇಕು.

ನ್ಯಾಯ ಗೇಣಿ ನಿರ್ಣಯಕ್ಕಾಗಿ ರೈತ ಸಂಘದ ಒತ್ತಾಯದಂತೆ ಕಳೆದ ವರುಷ ನ್ಯಾಯ ಗೇಣಿ ಕೋರ್ಟುಗಳನ್ನು ಮೈಸೂರು ಸರಕಾರ ಸ್ಥಾಪಿಸಿದೆ. ಈ ಕೋರ್ಟುಗಳಲ್ಲಿ ರೈತ ಸಂಘದ ಮೂಲಕ ನ್ಯಾಯ ಗೇಣಿ ನಿರ್ಣಯಕ್ಕಾಗಿ ಈಗಾಗಲೇ 300ಕ್ಕೂ ಮಿಕ್ಕಿದ ಅರ್ಜಿಗಳನ್ನು ರೈತರು ಹಾಕಿದ್ದಾರೆ. ಈ ಅರ್ಜಿಗಳಲ್ಲಿ ಹಲವು ಈಗಾಗಲೇ ತನಿಖೆಯಾಗಿದೆ. ಕೆಲವು ಅರ್ಜಿಗಳಲ್ಲಿ ತೀರ್ಪು ಬಂದಿದೆ.

ಹೆಚ್ಚಿನ ತೀರ್ಪುಗಳು ರೈತರ ಪರವಾಗಿಯೇ ಇದ್ದು, ಗೇಣಿಯಲ್ಲಿ ರಿಯಾಯಿತಿ ಸಿಕ್ಕಿದೆ. ಇಂದಿರುವ ಹೊರಲಾರದ ಗೇಣಿಯಲ್ಲಿ ಈಗ ಕಡಿಮೆಯಾಗಿದೆ. ಕೆಲವು ಅರ್ಜಿಗಳನ್ನು ಭೂಮ್ಹಾಲಕರು ರಾಜಿಗೆ ಬಂದು ಒಕ್ಕಲು ಧನಿಗಳೊಳಗೆ ಒಪ್ಪಂದವಾಗಿ ಕೋರ್ಟಿಗೆ 'ಜ್ಯೊಂಟ್ ಮೆನೊ' ಹಾಕಿದ ಪ್ರಕಾರ ತೀರ್ಪು ಸಿಕ್ಕಿದೆ.

ಸಿಕ್ಕಿದ ತೀರ್ಮಾನಗಳಲ್ಲಿ ಕೆಲವು ಅರ್ಜಿಯಲ್ಲಿ ಹಿಂದಿದ್ದ ಗೇಣಿಯಲ್ಲಿ 30ರಿಂದ ಶೇ. 45ರಷ್ಟು ಕಡಿಮೆಯಾದುದೂ ಇವೆ. ಒಂದೆರಡು ಅರ್ಜಿಗಳಲ್ಲಿ ಶೇ. 10 ಗೇಣಿ ಕಡಿಮೆಯಾಗಿದೆ.

ಹೆಚ್ಚಿನ ಅರ್ಜಿಗಳಲ್ಲಿ ಭೂಮ್ಹಾಲಕರ ಕಡೆಯಿಂದ ಪ್ರಸಿದ್ಧ ವಕೀಲರುಗಳು ವಾದಿಸಿದ್ದರು. ರೈತರ ಪರವಾಗಿ ರೈತ ಸಂಘದ ಕಾರ್ಯಕರ್ತರು ವಾದಿಸಿದ್ದರು. ಇನ್ನೂ ಒಂದು ಸ್ವಾರಸ್ಯವೆಂದರೆ ರೈತರಿಗೆ ಗೇಣಿ ಕಡಿಮೆಯಾಗಬಾರದೆಂದು ಭೂಮ್ಹಾಲಕರ ಪರವಾಗಿ ಪ್ರ. ಸೋ. ಮುಖಂಡ ಶ್ರೀ ಡಿ. ಮೋಹನ ರಾಯರು ವಾದಿಸುವುದು !

ಟೇಕ್ಸಿ ಮತ್ತು ಅಟೋರಿಕ್ಷಾದವರ ಸಭೆ

ದ. ಕ. ಅಟೋಮೋಬೈಲ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನಿನ ಆಶ್ರಯದಲ್ಲಿ ಟೇಕ್ಸಿ, ಅಟೋರಿಕ್ಷ ಡ್ರೈವರರ ಮತ್ತು ಓನರ್‌ರ ಸಭೆಯು ಬಸ್ ಸ್ಟಾಂಡ್ ಕಟ್ಟಡದ ಬಳಿ ತಾರೀಕು 27-9-58ರಂದು ಶ್ರೀ ಪಿ. ಎಂ. ಎಸ್. ಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಟೇಕ್ಸಿ ಮತ್ತು ಆಟೋರಿಕ್ಷಾದವರಿಗೆ ಸದ್ಯ ಆಗುತ್ತಿರುವ ತೊಂದರೆಗಳ ಕುರಿತು ಚರ್ಚಿಸಿ, ಪ್ರೈವೇಟು ಕಾರುಗಳಲ್ಲಿ ಬಾಡಿಗೆಗೆ ಪ್ರಯಾಣಿಕರನ್ನು ಸಾಗಿಸುವುದು ಇತ್ತೀಚೆಗೆ ಒಂದೇ ಸಮನೆ ಹೆಚ್ಚಾಗುತ್ತಿದ್ದು ಇದರಿಂದ ಟೇಕ್ಸಿಗಳವರಿಗೆ ತೊಂದರೆಯಾಗುವುದನ್ನು ಅಧಿಕಾರಿಗಳ ಗಮನಕ್ಕೆ ತರಲಾಗಿದ್ದರೂ ಹೆಚ್ಚಿನ ಕ್ರಮ ಕೈಕೊಳ್ಳದಿರುವುದಕ್ಕಾಗಿ ವಿಷಾಧ ಸೂಚಿಸಿ, "ಕಳ್ಳ ಟೇಕ್ಸಿ" ಗಳನ್ನು ಹಿಡಿದು ಕ್ರಮ ತೆಗೆದುಕೊಳ್ಳುವಂತೆ ಅಧಿಕಾರಿಗಳನ್ನೂ, ಸರಕಾರವನ್ನೂ ಒತ್ತಾಯಿಸುವ ಚಳುವಳಿಯನ್ನು ತೀವ್ರಗೊಳಿಸಬೇಕೆನ್ನುವ, ಜಿಲ್ಲೆಯ ಗಡಿದಾಟಿ ಹೊರ ಹೋಗುವಾಗ ಬಾಡಿಗೆ ಕಾರುಗಳವರು 2ರೂ. ಕಟ್ಟಿ ಪ್ರತ್ಯೇಕ ಪರ್ಮಿಟು ಪಡೆಯಬೇಕೆಂದಿರುವದನ್ನು ತಿದ್ದುಪಡಿಗೊಳಿಸಿ ಕರ್ನಾಟಕ ಪ್ರಾಂತ್ಯದಲ್ಲಿ ಯಾವ ಅಡೆತಡೆಯೂ ಇಲ್ಲದೆ ಸಂಚರಿಸುವಂತಾಗಬೇಕೆನ್ನುವ, ಅಂತರ್ ಪ್ರಾಂತೀಯ ಸಂಚಾರದಲ್ಲಿರುವ ತೊಂದರೆಗಳು ಹಾಗೂ ದಂಡ ವಸೂಲು ಮಾಡುವುದೇ ಮೊದಲಾದ ಕ್ರಮಗಳನ್ನು ನಿಲ್ಲಿಸಿ ಸಂಚಾರಕ್ಕನುಕೂಲವಾಗುವಂತೆ 7ದಿನಗಳ ತಾತ್ಕಾಲಿಕ ಪರ್ಮಿಟು ಕೊಡುವ ಕ್ರಮವನ್ನು ಜ್ಯಾರಿಗೆ ತರಬೇಕೆಂದು ಸರಕಾರವನ್ನು ವಿನಂತಿಸುವ, ಮುನ್ಸಿಪಾಲಿಟಿಯವರು ಟೇಕ್ಸಿ ಮತ್ತು ಆಟೋರಿಕ್ಷಾದವರಿಂದ ತಿಂಗಳಿಗೊಮ್ಮೆ ಟೇಕ್ಸ್ ವಸೂಲುಮಾಡುವುದನ್ನು ವಿರೋಧಿಸಿ ದಿನಕ್ಕೆ ನಾಲ್ಕಾಣೆಯಂತೆ ಸ್ಟಾಂಡಿಗೆ ಬಂದ ದಿನಗಳಲ್ಲಿ ಮಾತ್ರ ವಸೂಲು ಮಾಡುವಂತೆ ಮತ್ತು ಸ್ಟಾಂಡಿನಲ್ಲಿ ಕಲ್ಲುಗಳೆದ್ದು ಹೊಂಡ ಬಿದ್ದಿರುವುದರಿಂದ ಸ್ಟಾಂಡಿಗೆ ಕಾಂಕ್ರೀಟು ಹಾಕಿಸಬೇಕೆಂದು ಮುನ್ಸಿಪಾಲಿಟಿಯನ್ನು ಕೇಳಿಕೊಳ್ಳುವ, ಬ್ರೇಕ್ ಇನ್ಸ್‌ಪೆಕ್ಟರರು ಯೂನಿಫಾರಂ ಇಲ್ಲದೆ ಬಂದು ವಾಹನಗಳನ್ನು ನಿಲ್ಲಿಸಿ ರಶೀದಿಕೊಡದೆ ಲೈಸನ್ಸ್ ತೆಗೆದುಕೊಂಡು ಹೋಗುವ ಕ್ರಮವನ್ನು ವಿರೋಧಿಸುವ ಇವೇ ಮೊದಲಾದ ಠರಾವುಗಳು ಸ್ವೀಕೃತವಾದವು.

ಸಂಘಟನೆಯನ್ನು ಬಲಪಡಿಸುವ ಕುರಿತು, ಕಾರ್ಯದರ್ಶಿ ಶ್ರೀ ಡೇವಿಡ್‌ಕರ್ತಡರು ಮತ್ತು ಅಧ್ಯಕ್ಷರು ಮಾತಾಡಿದರು.

ಉಡುಪಿ

ನೇಕಾರರ ಸಭೆ

ತಾ. 21-9-58ರಲ್ಲಿ ಉಡುಪಿ ತಾಲ್ಲೂಕು ನೇಕಾರರ ಸಂಘದ ಪ್ರತಿನಿಧಿ ಸಭೆಯು ಕಾ| ಸಿಂಪ್ಸನ್ ಸೋನ್ಸರ ಅಧ್ಯಕ್ಷತೆಯಲ್ಲಿ ಜರುಗಿತು. ಸಮಾರಂಭದಲ್ಲಿ, ವಿಶ್ವಶಾಂತಿ ಚಳುವಳಿಯ ಅಗ್ರಗಣ್ಯ ನಾಯಕರೂ ಮಹಾ ವಿಜ್ಞಾನಿಯೂ ವಿದ್ವತ್ ಪುರುಷರೂ ಆದ ಪ್ರೊ. ಜ್ಯೋಲಿಯೋ ಕ್ಯೂರಿಯವರ ನಿಧನದ ಬಗ್ಗೆಯೂ, ಕಳೆದ ಅನೇಕ ವರ್ಷಗಳಿಂದ ನೇಕಾರ ಸಂಘದ ಸದಸ್ಯರಾಗಿದ್ದ ಶ್ರೀ ಫೇನಿಕ್ಸ್ ಸೋನ್ಸರು ಅಕಾಲ ದುರ್ಮರಣಕ್ಕೀಡಾದ ಬಗ್ಗೆಯೂ ಸಭೆಯು ತನ್ನ ದುಃಖ ಸೂಚಿಸಿತು. ಮತ್ತು ಇದೇ ತಾ. 1-9-58ರಲ್ಲಿ ಕಾಸರಗೋಡು ತಾಲ್ಲೂಕಿನ ಪೈವಳಿಕೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿ ಮತ್ತು ರೈತ ಸಂಘದ ಕಾರ್ಯಕರ್ತರುಗಳಾದ ಕಾ| ಸುಂದರಸೆಟ್ಟಿ, ಮಹಾಬಲ ಶೆಟ್ಟರನ್ನು ಗುಂಡಿಕ್ಕಿ ಕೊಂದ ಮತ್ತು ಕತ್ತಿ-ಭರ್ಜಿಗಳಿಂದ ತಿವಿದು ಮೃಗೀಯ ಕಿರಾತ ಮರ್ಧನ ನಡೆಸಿದ ಭೂಮಾಲಕ ಸಂಕಪ್ಪನಾಯಕನೇ ಮೊದಲಾದ ಗೂಂಡಾಗಳ ವರ್ತನೆಯನ್ನು ಸಭೆಯು ತೀವ್ರವಾಗಿ ವಿರೋಧಿಸಿ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿತು, ನಂತರ ಸಂಘದ ಕಾರ್ಯದರ್ಶಿ ಕೆ. ಗುರುರಾಜ ಸೆಟ್ಟಿಗಾರರು ಸಭೆಗೆ ವರದಿಯನ್ನಿತ್ತರು. ವರದಿಯ ಬಗ್ಗೆ ಚರ್ಚೆ ನಡೆದು ಪ್ರತಿನಿಧಿಗಳು ಸೂಚಿಸಿದ ತಿದ್ದುಪಡಿಗಳನ್ನು ಸ್ವೀಕರಿಸಲಾಯ್ತು.

ನಂತರ ನೇಕಾರರ ಕೂಲಿ ಹೆಚ್ಚಳ ಮತ್ತಿತ್ತರ ಅವಶ್ಯ ಕೇಳಿಕೆಗಳನ್ನು ಮೈಸೂರು ಸರಕಾರವು ಟ್ರಿಬ್ಯೂನಲ್ಲಿಗೆ ಹಾಕದೆ ಕಾಲಹರಣ ಮಾಡುತ್ತಿರುವುದನ್ನು ತೀವ್ರವಾಗಿ ಪ್ರತಿಭಟಿಸಲಾಯಿತು. ಮತ್ತು ಕೇಳಿಕೆಗಳನ್ನು ಮೈಸೂರು ಸರಕಾರ ಕೂಡಲೆ ಟ್ರಿಬ್ಯೂನಲಿಗೆ ಹಾಕುವಂತೆ ತಕ್ಕ ಒತ್ತಾಯಮಾಡಲು ಮನವಿ-ಸಹಿ ಸಂಗ್ರಹ-ಮತ ಪ್ರದರ್ಶನವೇ ಮೊದಲಾದ ರೀತಿಯಲ್ಲಿ ತೀವ್ರ ಚಳುವಳಿ ನಡೆಸಬೇಕೆಂದೂ ಮೈಸೂರು ಸರಕಾರದ ಪ್ರತಿಗಾಮಿ ನೀತಿಯನ್ನು ಬಲವಾಗಿ ವಿರೋಧಿಸಬೇಕೆಂದು ತೀರ್ಮಾನಿಸಲಾಯಿತು. ಸಂಘದ ಅಧ್ಯಕ್ಷರಾದ ಕಾ| ಇಮ್ಮಾನುವೇಲ್, ಡಿ. ಜತ್ತನ್ನ ಮತ್ತು ತೇಜಪಾಲ ಕೋಚ್ಯಾನರವರು ಸಲಹೆ ಸೂಚನೆಗಳನ್ನಿತ್ತು ಮಾತಾಡಿದರು. ಅಧ್ಯಕ್ಷರ ಭಾಷಣ, ಧನ್ಯವಾದವಾಗಿ ಸಭೆ ಮುಕ್ತಾಯವಾಯ್ತು.

ಪ್ರಾಂತೀಯ ಸುದ್ದಿ ಸಂಗ್ರಹ

ದೊಡ್ಡಬಳ್ಳಾಪುರ

ಮಂಡಲ ಕಾಂಗ್ರೆಸ್ ಅಧ್ಯಕ್ಷರ ಕಿತಾಪತಿ

ದೊಡ್ಡಬಳ್ಳಾಪುರದಲ್ಲಿ ಗಾಂಧಿ ಸಪ್ತಾಹದ ಅಂಗವಾಗಿ ದೊಡ್ಡಬಳ್ಳಾಪುರದ ಮಂಡಲ ಕಾಂಗ್ರೆಸ್ ಅಧ್ಯಕ್ಷರು ಕಿತಾಪತಿಯನ್ನು ಮೊದಲು ಮಾಡಿದ್ದಾರೆ. ಕಾಂಗ್ರೆಸ್ ಆಫೀಸಿನಲ್ಲಿ ಮಾಲೀಕರ ಸಭೆ ನಡೆಸುವುದು. ಕಾರ್ಮಿಕರ ವಿರುದ್ಧ ಪಿತೂರಿ ನಡೆಸುವುದು. ಸರ್ಕಾರಿ ನೌಕರರನ್ನು ಮಾಲೀಕರ ಜೊತೆಯಲ್ಲಿ ಕೂರಿಸಿಕೊಂಡು ಸಂಚು ನಡೆಸುವುದು. ನಾಟಕಗಳಿಗೆ ಬಿಟ್ಟ ಪಾಸುಗಳನ್ನು ತಮ್ಮವರಿಗೆಲ್ಲಾ ಗಲಾಟೆಮಾಡಿ ಕೊಡಿಸುವುದು. ರೈತ ಮತ್ತು ಕಾರ್ಮಿಕ ನಾಯಕರ ವಿರುದ್ಧ ಅಪಪ್ರಚಾರದ ಚೀಟಿಗಳನ್ನು ಪ್ರಿಂಟುಮಾಡಿಸಿ ಹಂಚುವುದು- ಈ ಪಂಚ ಸೂತ್ರಗಳನ್ನು ಅಕ್ಷರಶಃ ಪಾಲಿಸಲು ತಮ್ಮ ಕಾರ್ಯಕ್ರಮವನ್ನಾಗಿ ಗೊತ್ತುಮಾಡಿದ್ದಾರೆ. ಪಾದಚಾರಿಯಾಗಿ ಜನತೆಯ ಮಧ್ಯೆ ಹೋಗಬೇಕೆಂಬ ಕರೆಯನ್ನು ಮನ್ನಿಸಿ ತಿರುಗಿ ತಿರುಗಿ ಪಾದಗಳು ಊದಿಕೊಂಡಿದ್ದರಿಂದ ಮಾಲೀಕರ ಹಣದ ಬಾಡಿಗೆ ಕಾರಿನಲ್ಲಿ ಪೋಲೀಸರನ್ನು ನೋಡಲು ಬೆಂಗಳೂರಿಗೂ ದೊಡ್ಡಬಳ್ಳಾಪುರಕ್ಕೂ ತಿರುಗುತ್ತಿದ್ದಾರೆ.

ರತ್ನಭರ್ವ ಹೋಟೆಲ್ ಮಾಲೀಕರು ತಾ. 17-9-58ರಂದು ಕೆಲಸಗಾರರನ್ನು ಹೊಡೆದು ಸಾಮಾನುಗಳನ್ನೆಲ್ಲಾ ಬೀದಿಗೆ ಸೆದು ನೂಕಿ ತಾ. 24ರಂದು ಇನ್ನುಳಿದ ಇಬ್ಬರನ್ನು ಪೊರಕೆಯಿಂದ ಹೊಡೆದು ತಳ್ಳಿದರು ಈ ಸಣ್ಣ ಹುಡುಗರು ಅಳುತ್ತಾ ಇಲ್ಲಿನ ಕಾರ್ಮಿಕ ಸಂಘದ ಆಫೀಸಿಗೆ ಬಂದರು. ಆಗ ಹಸಿವಿನಿಂದ ನರಳುತ್ತಿದ್ದ ಅವರಿಗೆ ಅಡಿಗೆ ಮಾಡಿಕೊಳ್ಳಲು ಸಾಮಾನು ತರಲು ಹಣ ಕೊಟ್ಟು ಕಳುಹಿಸಲಾಗಿದ್ದಿತು. ಅವರು ದಾರಿಯಲ್ಲಿ ಸೌದೆ ತರುತ್ತಿದ್ದರೆ ಮಾಲೀಕರು ಓಡಿಬಂದು ನಾಯಿಗಳಂತೆ ದರದರನೆ ಎಳೆದೊಯ್ದು ತಮ್ಮ ಹೋಟೆಲಿನಿಂದ ಕದ್ದು ತಂದರೆಂದು ಪೋಲೀಸ್ ಸ್ಟೇಷನ್ನಿಗೆ ಕೊಟ್ಟರು. ಆಗ ಕಂಡ ಕೆಲವು ನಾಗರಿಕರು ಮಾಲೀಕರನ್ನು ಛೀಗುಟ್ಟಿ ಇಂಥ ಪಶುತ್ವರೀತಿಗೆ ಹೇಸಿ ಸ್ಟೇಷನ್ನಿನಿಂದ ಹುಡುಗರನ್ನು ಬಿಡಿಸಿದರು. ಇದನ್ನೆಲ್ಲಾ ಪ್ರತಿಭಟಿಸಿ ಕಾರ್ಮಿಕರು ತಮ್ಮನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಶಾಂತ ರೀತಿಯಿಂದ ಸತ್ಯಾಗ್ರಹವನ್ನಾಚರಿಸುತ್ತಿದ್ದಾರೆ. ಇಂಥ ಮಾಲೀಕರ ಹೇಯ ನೀತಿಗೆ ಮಂಡಲ ಕಾಂಗ್ರೆಸ್ ಅಧ್ಯಕ್ಷರು ಪೋಷಕರಾಗಿ ಕಾರ್ಮಿಕ ದ್ರೋಹಿಗಳಾಗಿ ವರ್ತಿಸುತ್ತಿದ್ದಾರೆ.

ಹರಿಹರ—

ಕಿರ್ಲೋಸ್ಕರ್ ಕೆಲಸಗಾರರ ಕಾರ್ಯಕಾರಿ ಸಮಿತಿ ಸಭೆ

ಮೈಸೂರು ಕಿರ್ಲೋಸ್ಕರ್ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ತಾ. 26-9-'58ರಂದು ಸಂಘದ ಆಫೀಸಿನಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಂ. ಸಿ. ನರಸಿಂಹನ್‌ರವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಸಭೆಯಲ್ಲಿ ಕೈಗಾರಿಕಾ ಕೋರ್ಟಿನಲ್ಲಿರುವ ಬೇಡಿಕೆಗಳ ಬಗ್ಗೆ ಈವರೆಗೆ ಆದ ಕೆಲಸದ ವರದಿಯನ್ನು ಮತ್ತಿತರ ವಿಷಯಗಳನ್ನು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಮಾಡಲಾಯಿತು.

ತಮ್ಮ ಬೇಡಿಕೆಗಳಿಗಾಗಿ ಇದೇ ತಿಂಗಳು 8ರಿಂದ ಹಟ್ಟಿ ಚಿನ್ನದ ಗಣಿ ಕಾರ್ಮಿಕರು ಹೂಡಿರುವ ಮುಷ್ಕರಕ್ಕೆ ತನ್ನ ಸಂಪೂರ್ಣ ಬೆಂಬಲವನ್ನು ಕೊಡುವ, ಹಣದ ಸಹಾಯ ಮಾಡಬೇಕೆನ್ನುವ ಮತ್ತು ಮುಷ್ಕರ ಹೂಡಿ, ಒಂದು ತಿಂಗಳಾಗುತ್ತಾ ಬಂದರೂ ಈವರೆಗೂ ಸರಕಾರ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವದರಲ್ಲಿ ತೋರುತ್ತಿರುವ ಆಲಸ್ಯದ ಬಗ್ಗೆ ಸಭೆಯು ವಿಷಾದ ವ್ಯಕ್ತಪಡಿಸಿತಲ್ಲದೆ, ಸರ್ಕಾರದವರು ಕೂಡಲೇ ಮಧ್ಯೆ ಪ್ರವೇಶಿಸಿ, ಕಾರ್ಮಿಕರ ಬೇಡಿಕೆಗಳನ್ನು ಬಗೆಹರಿಸಬೇಕೆಂದು ಸರ್ಕಾರವನ್ನು ಒತ್ತಾಯಪೂರ್ವಕ ಬಿನ್ನವಿಸಲಾಯಿತು. ಆಹಾರ ಧಾನ್ಯಗಳ ಮತ್ತು ಜನರ ನಿತ್ಯೋಪಯೋಗಿ ವಸ್ತುಗಳ ಧಾರಣೆ ವಾಸಿಗಳು ದಿನದಿನಕ್ಕೂ ಹೆಚ್ಚುತ್ತಲಿದ್ದು, ಬಡ ಕಾರ್ಮಿಕರಿಗೂ, ಮಧ್ಯಮ ವರ್ಗದ ಜನರು ಜೀವನ ನಡೆಸುವ

(೩ನೇ ಪುಟ ನೋಡಿ)

ಸಂಘದ ಚುನಾವಣೆ ನಡೆಸಿ !

ಇದೇ ತಾ. 27-9-58ರಲ್ಲಿ ಭದ್ರಾವತಿ ಕಾಗದದ ಕಾರ್ಖಾನೆಯ ಕೂಲಿಗಾರ ಸಂಘದ ಸರ್ವಸದಸ್ಯರ ಸಭೆಯನ್ನು ಕರಯಲಾಗಿತ್ತು.

ಕಾಗದದ ಕಾರ್ಖಾನೆಯ ಕೂಲಿಗಾರ ಸಂಘದ ಚುನಾವಣೆ ನಡೆದು ಈಗಾಗಲೇ ಎರಡೂವರೆ ವರ್ಷಗಳ ಮೇಲಾಯ್ತು. ಈ ವರ್ಷದ ಚುನಾವಣೆ ಜುಲೈ ತಿಂಗಳಿನಲ್ಲಿಯೇ ನಡೆಯಬೇಕಾಗಿದ್ದು; ಚುನಾವಣೆಯನ್ನು ತಕ್ಷಣ ಏರ್ಪಡಿಸಬೇಕೆಂದು ಕಾರ್ಮಿಕರ ಒತ್ತಾಯವಿದ್ದರೂ ಸಹ ಇಲ್ಲಸಲ್ಲದ ನೆವವನ್ನು ಹೇಳಿ ಚುನಾವಣೆಯನ್ನು ಮುಂದೂಡುತ್ತಾ ಇದ್ದಾರೆ.

ಲೇಬರ್ ಕಮೀಶನರೂ ಸಹ ಕಾನೂನುರಿತ್ಯ ನಡೆಯಬೇಕಾದ ಚುನಾವಣೆಯನ್ನು ಕೂಡಲೇ ನಡೆಸದಿದ್ದಲ್ಲಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಸಂಘದ ಅಧ್ಯಕ್ಷರಿಗೆ ಎಚ್ಚರಿಕೆ ಸಹ ಕೊಟ್ಟಿದ್ದಾರೆಂದು ತಿಳಿದುಬಂದಿದೆ.

ಕೆಲಸಗಾರರ ಒತ್ತಾಯ ಹಾಗೂ ಸರಕಾರದ ಎಚ್ಚರಿಕೆಗಳ ಕಾರಣದಿಂದ ಚುನಾವಣೆಯ ವಿಷಯದ ಬಗ್ಗೆ ಸರ್ವಸದಸ್ಯರ ಸಭೆಯನ್ನು ಕರೆದಿದ್ದರು. ಈ ಸಭೆಯ ಮುಂದೆ ಇದ್ದ ಮುಖ್ಯ ವಿಷಯಗಳೆಂದರೆ 57-58ನೇ ಸಾಲಿನಲ್ಲಿ ಬರಬೇಕಾದ ಬಾಕಿ 3ತಿಂಗಳ ಬೋನಸ್ಸು ಮತ್ತು ಚುನಾವಣೆಯ ವಿಷಯ.

ಸಂಪಾದಕರಿಗೆ ಪತ್ರಗಳು

ಕಾರ್ಖಾನೆಯ ಆಡಳಿತವರ್ಗವು ಈಗಾಗಲೇ 57-58ನೇ ಸಾಲಿನಲ್ಲಿ 3ತಿಂಗಳ ಬೋನಸ್ಸನ್ನು ಕೊಟ್ಟಿದ್ದಾರೆ. 3 ತಿಂಗಳ ಬೋನಸ್ಸನ್ನು ಆಡಳಿತವರ್ಗ ಕೊಟ್ಟಾಗ ಯಾವ ಪ್ರತಿಭಟನೆಯನ್ನೂ ತೋರಿಸದೆ ಹಾಲಿ ಸಂಘದ ಅಧ್ಯಕ್ಷರು ಒಪ್ಪಿಕೊಂಡು ತಮ್ಮ ಕರ್ತವ್ಯ ಲೋಪದಿಂದ ಕೂಲಿಗಾರರಿಗೆ ನ್ಯಾಯವಾಗಿ ಸಿಗಬಹುದಾದ ಹೆಚ್ಚಿನ ಪ್ರತಿಫಲಕ್ಕೆ ಅಡ್ಡಿಯಾದರಲ್ಲದೆ; ಈ ಅನ್ಯಾಯ ಸಾಲದೆಂಬಂತೆ. ನ್ಯಾಯವಾಗಿ ಸಲ್ಲಬೇಕಾಗಿದ್ದ ಹೆಚ್ಚಿನ ಬೋನಸ್ಸಿನ ವಿಷಯವನ್ನು ಚುನಾವಣಾ ಘೋಷಣೆಯಾಗಿ ಉಪಯೋಗಿಸಲು ಪ್ರಯತ್ನಪಟ್ಟು, ಚುನಾವಣೆ ನಡೆಯದೇ ಇರುವಂತೆ ಇಲ್ಲಸಲ್ಲದ ಕಾರಣವನ್ನು ಕಾರ್ಮಿಕರ ಮುಂದೆ ಹೇಳಲು ಶುರುಮಾಡಿದಾಗ, ಕಾರ್ಮಿಕರು ಚುನಾಯಿತ ಪ್ರತಿನಿಧಿಗಳ ಕರ್ತವ್ಯಲೋಪ ಹಾಗೂ ಇಲ್ಲದ ನಾಟಕಗಳಿಗೆ ತೀವ್ರವಾಗಿ ಪ್ರತಿಭಟಿಸಿ ಇಂತಹ ಹೊಸ ಚಾಕಚಕ್ಯತೆಗಳನ್ನು ಪ್ರದರ್ಶಿಸದೆ ಸಂಘದ ಚುನಾವಣೆಯನ್ನು ನಡೆಸಬೇಕೆಂದು ಒತ್ತಾಯಪಡಿಸಿದರು.

ಆದರೆ ಕೂಲಿಗಾರರ ಸಮಸ್ಯೆಯನ್ನು ತಮ್ಮ ಅಧಿಕಾರಾವಧಿಯಲ್ಲಿ ತೃಪ್ತಿಕರವಾಗಿ ಪರಿಹರಿಸದೆ ಕೂಲಿಗಾರರ ಅಸಂತೃಪ್ತಿಗೆ ಒಳಗಾಗಿರುವ ಈಗಿನ ಚುನಾಯಿತ ಪ್ರತಿನಿಧಿಗಳು ಈಸಲ ಚುನಾವಣೆಯನ್ನು ಎದುರಿಸಲಾರದೆ ಸರ್ವಸದಸ್ಯರ ಸಭೆಯಲ್ಲಿ ಚುನಾವಣೆ ನಡೆಯಲಿ ಎಂದು ಬಹುಮತ ಸದಸ್ಯರ ಅಭಿಪ್ರಾಯ ತಿಳಿಸಿದಾಗ್ಯೂ ಸಹ ಸಭೆಯ ತೀರ್ಮಾನವನ್ನು ರಿಕಾರ್ಡ್ ಮಾಡಿಕೊಳ್ಳದೆ ಸಭೆಯನ್ನು ವಿಸರ್ಜಿಸಿ, ಸಂಘದ ಪ್ರತಿನಿಧಿಗಳು ಸಭೆಯಿಂದ ಹೊರಟುಹೋಗಿ ಸಂಘದ ಸದಸ್ಯರಿಗೂ, ಸಂಘದ ಗೌರವಕ್ಕೂ ಅಗೌರವ ಮಾಡಿದ್ದು ಖಂಡನೀಯ.

ಅಧಿಕಾರಾವಧಿಯಲ್ಲಿ ಸ್ವಾರ್ಥಪರರಾಗಿ ಕೆಲಸಮಾಡಿ ಜನರ ವಿಶ್ವಾಸವನ್ನು ಕಳೆದುಕೊಂಡು ಚುನಾವಣೆಯನ್ನು ಎದುರಿಸಲು ಹೆದರಿ ಈ ರೀತಿ ವರ್ತಿಸುವುದು ಕೂಲಿಗಾರ ಕ್ಷೇತ್ರಕ್ಕೆ ಬಗೆಯಬಹುದಾದ ದ್ರೋಹವೇ ಸರಿ.

ಈಗಲಾದರೂ ಕೆಲಸಗಾರರ ಕೇಳಿಕೆ ಹಾಗೂ ಲೇಬರ್ ಕಮೀಶನರ ಆಜ್ಞೆಯಂತೆ ಚುನಾವಣೆಯನ್ನು ಏರ್ಪಡಿಸಲಿ. ಈಗಿನ ಚುನಾಯಿತ ಮುಖಂಡರು ತಮ್ಮ ಎರಡು ವರ್ಷದ ಅವಧಿಯಲ್ಲಿ ಕಾರ್ಮಿಕರ ಹಿತ ರಕ್ಷಿಸಿದಲ್ಲಿ ಜನ ಅವರನ್ನೇ ಪುನಃ ಆರಿಸಿಯಾರು

—ಓರ್ವ ಕಾರ್ಮಿಕ

ಪೋಲೀಸರ ಕಿರುಕುಳ ನಿಲ್ಲಲಿ !

ತುಮಕೂರು ಜಿಲ್ಲೆಯಲ್ಲಿ ಮೋಟಾರು ಕಾರ್ಮಿಕರ ಸಂಘಟನಾ ಚಟುವಟಿಕೆಯನ್ನು ಮುರಿಯಲು ಮೋಟಾರು ಮಾಲೀಕರಿಗೆ ತುಮಕೂರು ಜಿಲ್ಲೆಯ ಪೋಲೀಸರು ನೇರಸಹಾಯ ನೀಡುತ್ತಿದ್ದಾರೆ. ಮೋಟಾರು ಮಾಲೀಕರನೇಕರು ಮಜೂರರಿಗೆ ಯಾವುದೇ ಸವಲತ್ತು ಕಾನೂನಿನ ಆಶ್ರಯದಲ್ಲಿಯೂ ದೊರಕದಂತೆಮಾಡಲು ಸದಾಕಾಲ ಕೆಲಸಗಾರರನ್ನು ಅವರ ಕೆಲಸದಿಂದ ವಜಾ ಮಾಡುತ್ತಿರುವುದನ್ನು ತಡೆದು ಕೆಲಸಗಾರರನ್ನು ಖಾಯಂಆಗಿ ನೇಮಕಮಾಡಿಕೊಳ್ಳಬೇಕೆಂದು ಒತ್ತಾಯವನ್ನು ಮೋಟಾರು ಕೆಲಸಗಾರರ ಯೂನಿಯನ್ನಿನವರು ಬೇಡಿದ್ದರಿಂದ ಮಾಲೀಕರು ಈ ಜಿಲ್ಲೆಯ ಕೆಲಸಗಾರರೇ ನಮಗೆ ಬೇಡ, ನಾವು ಹೊರಗಿನಿಂದ ಮೋಟಾರು ಡ್ರೈವರ್‌ಗಳನ್ನು ತಂದು ನೇಮಿಸಿಕೊಳ್ಳುತ್ತೇವೆ ಎಂದು ಒನ್ಮೆ ಮೂರು ಜನ ಹೊರಗಿನ ಡ್ರೈವರ್‌ಗಳನ್ನು ಕರೆದುಕೊಂಡು ಬಂದು ಕೆಲಸಕ್ಕೆ ನೇಮಿಸಿಕೊಂಡರು. ಆ ಕೆಲಸಗಾರನನ್ನು ಸಂಘದವರು ಕಂಡು ಮಾತನಾಡಿದಾಗ ಅವರುಗಳು ಕೆಲಸಗಾರರ ಒಗ್ಗಟ್ಟನ್ನು ಮುರಿಯುವಂಥ ಕೆಲಸಕ್ಕೆ ನಾವು ನಿಲ್ಲುವುದಿಲ್ಲವೆಂದು ಅವರು ಮಾಲೀಕರುಗಳಿಗೆ ಉತ್ತರ ಹೇಳಿ ಸಂಘದವರಿಂದ ಗೌರವ ಪಡೆದು ತಮ್ಮ ಸ್ಥಳಗಳಿಗೆ ವಾಪಸು ಹೋದರು. ಇದನ್ನು ಕಂಡ ಮಾಲೀಕರು ಘಾಬರಿಯಾಗಿ ಪೋಲೀಸರ ಮರೆಹೊಕ್ಕು ಪೋಲೀಸರ ಸರ್ಪಕಾವಲಿನಲ್ಲಿ ಇನ್ನೊಬ್ಬ ತುಮಕೂರು ಜಿಲ್ಲೆಯವನಲ್ಲದ ಡ್ರೈವರನ್ನು ಕರೆತಂದು ಗಾಡಿ ನಡೆಸುತ್ತಿದ್ದಾರೆ. ಗಾಡಿ ಎಲ್ಲಿಗೆ ಹೋದರೂ ಪೋಲೀಸಿನವನು ಗಾಡಿಯ ಜತೆಯಲ್ಲಿಯೇ ಇರುತ್ತಾನಲ್ಲದೆ ಆ ಡ್ರೈವರನೊಂದಿಗೆ ಯಾರೊಬ್ಬರೂ ಮಾತನಾಡದಂತೆ ಕಾಯುವುದೂ ಆ ಪೋಲೀಸನ ಕೆಲಸವಾಗಿದೆ.

—ನೊಂದವ

ತುಮಕೂರು—

ಮೋಟಾರು ಕೆಲಸಗಾರರ ಪ್ರತಿಭಟನಾ ಸಭೆ

ತುಮಕೂರಿನ ಮೋಟಾರು ಕಾರ್ಮಿಕರು 300ಕ್ಕೆ ಮೇಲ್ಪಟ್ಟು ತಾರೀಕು 29-9-58ರಂದು ಪ್ರತಿಭಟನಾ ಮೆರವಣಿಗೆಯನ್ನು ಊರಿನ ಮುಖ್ಯ ಪೇಟೆಗಳಲ್ಲಿ ನಡೆಸಿ ಬಸ್‌ಸ್ಟಾಂಡಿನಲ್ಲಿ ಬಹಿರಂಗ ಸಭೆಯನ್ನು ನಡೆಸಿದರು. ಮೆರವಣಿಗೆಯ ಮುಂದಾಳುತ್ವವನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ. ಆರ್. ಕಂಠೀರವ ಮೂರ್ತಿಯವರು ವಹಿಸಿದ್ದರು. ಸಂಘದ ಕಾರ್ಯದರ್ಶಿಗಳಾದ ಕಾ॥ ಕೆ. ವಿ. ಕೃಷ್ಣಸ್ವಾಮಿಗಳು ಕಾರ್ಮಿಕರನ್ನುದ್ದೇಶಿಸಿ ಭಾಷಣ ಮಾಡುತ್ತಾ ಇಂಥ ಕಾರ್ಮಿಕ ಸಂಘಟನಾ ವಿರೋಧ ಚಟುವಟಿಕೆಗಳಿಗೆ ಪೋಲಿಸ್ ಸಹಾಯವನ್ನು ಮುಂದುವರಿಸಿದಲ್ಲಿ ಜಿಲ್ಲೆಯಾದ್ಯಂತ ಮುಷ್ಕರವನ್ನು ಆಚರಿಸಬೇಕಾದೀತೆಂದು ಎಚ್ಚರಿಕೆಯನ್ನಿತ್ತರು.

ಹುಬ್ಬಳ್ಳಿ—

ಪಾರ್ಟಿ ಶಾಖೆಯ ಪುನರ್‌ಸ್ಥಾಪನೆ

ತಾ. 24ರಂದು ಸಂಜೆ ಹುಬ್ಬಳ್ಳಿಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಕಚೇರಿಯಲ್ಲಿ ಪಾರ್ಟಿಯ ಕಾರ್ಯಕರ್ತರ ಸಭೆಯು ಶ್ರೀ ಬಿ. ವಿ. ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ಜರಗಿ, ಹುಬ್ಬಳ್ಳಿಯ ಪಾರ್ಟಿ ಶಾಖೆಯನ್ನು ಪುನಃ ಸ್ಥಾಪಿಸಲಾಯಿತು ಮತ್ತು ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು. ಕಾರ್ಯಕಾರೀ ಸಮಿತಿಗೆ ಶ್ರೀ ಎ. ಜೆ. ಮುಧೋಳ್ ಕಾರ್ಯದರ್ಶಿಯಾಗಿ ಆರಿಸಲ್ಪಟ್ಟರಲ್ಲದೆ, ಶ್ರೀಗಳಾದ ಕೆ. ಶಾಂತಪ್ಪ, ತಡಸದಮಠ, ಅಜೀಜ್ ಹಾಗೂ ಡಾ॥ ಶೇಕ ಇವರು ಸದಸ್ಯರಾಗಿ ಚುನಾಯಿಸಲ್ಪಟ್ಟರು.

ಶಿವಮೊಗ್ಗೆ—

ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿ ಸಮ್ಮೇಳನ

1958ನೇ ನವೆಂಬರ್ 1 ಮತ್ತು 2ನೇ ತಾರೀಕು, ಶಿವಮೊಗ್ಗಾ ನಗರದಲ್ಲಿ ಸಮಾವೇಶಗೊಳ್ಳುತ್ತದೆ.

ಕೇರಳದ ದೇವೀಕುಲಂ ಉಪ ಚುನಾವಣೆಯಲ್ಲಿ ಪ್ರಚಂಡ ಬಹುಮತದಿಂದ ಆರಿಸಿ ಬಂದ ಶಾಸನ ಸಭಾ ಸದಸ್ಯೆ ಶ್ರೀಮತಿ ರೋಸಮ್ಮ ಪುನ್ನೂಸ್ ಸಮ್ಮೇಳನದಲ್ಲಿ ಭಾಗವಹಿಸುವರು.

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಕಾರ್ಯಕಾರಿ ಸದಸ್ಯರಾದ ಮದ್ರಾಸಿನ ಕಾ॥ ಪಿ. ರಾಮಮೂರ್ತಿಯವರು ಸಮ್ಮೇಳನದಲ್ಲಿ ಭಾಗವಹಿಸುವ ನಿರೀಕ್ಷೆ ಇದೆ.

ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲು ಶ್ರೀ ಬಿ. ಎನ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ. ಸಾರ್ವಜನಿಕರು ಸ್ವಾಗತ ಸಮಿತಿಗೆ ಎಲ್ಲ ರೀತಿಯಲ್ಲಿಯೂ ಬೆಂಬಲವೀಯಬೇಕೆಂದು ವಿನಂತಿ ಮಾಡಿಕೊಳ್ಳಲಾಗಿದೆ.

ಕಾ॥ ಶ್ರೀಗುರುರವರ ಅಕಾಲ ನಿಧನ !

ಗುಲ್ಬರ್ಗ ಜಿಲ್ಲೆಯ ದಂಡೋತಿಯ ರೈತ ಸಂಘದ ಕಾರ್ಯಕರ್ತರೂ ಮುಂದಾಳುಗಳೂ ಆಗಿದ್ದ ಕಾಮ್ರೇಡ್ ಶ್ರೀಗುರು ಇವರು ತಾ. 21—9—58ರಂದು ಹಠಾತ್ತನೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 32 ವರ್ಷ ವಯಸ್ಸಾಗಿತ್ತು. ಶ್ರೀರವರು ದಂಡೋತಿಯ ಕಿಸಾನ್ ಸಭೆಯ ಕಾರ್ಯದರ್ಶಿಯಾಗಿದ್ದರು.

ಗುಲ್ಬರ್ಗ ಜಿಲ್ಲಾ ಕಿಸಾನ್ ಸಭೆಯು ಮೃತರ ಬಗ್ಗೆ ಸಂತಾಪ ಸೂಚಕ ನಿರ್ಣಯವೊಂದನ್ನು ಅನುಮೋದಿಸಿದೆ.

ಜೋಡಿದಾರರ ಕಾಣಿಕೆ !

(೫ನೇ ಪುಟದಿಂದ)

ತಿಂಗಳಲ್ಲಿ ಆತನಿಗರಿಯದಂತೆಯೇ ಅನೇಕ ಹೃದಯವಿದ್ರಾವಕ ಘಟನೆಗಳು ನಡೆದಿದ್ದವು. ತನ್ನ ಬಾಳೆಯ ತೋಟದ ರಕ್ಷಣೆಗೆಂದು ಹೊರಟಿದ್ದ, ಪುಟ್ಟನ ದೊಡ್ಡಿಯ ಹಲವಾರು ರೈತ ಯುವಕರು ಜೈಲುವಾಸದಲ್ಲಿದ್ದರು.

ಏನನ್ನೂ ಮಾಡಲಾಗದೆ; ಏನು ಮಾಡಲೂ ತೋಚದೆ, ಎದೆಯೊಡೆದು ಗೋಳಿಟ್ಟನು—ರಾಮಣ್ಣ. ಆತನ ಗೋಳನ್ನು ನೋಡಿ ಬಾಳೆಯ ಮರಗಳು ಕೈಬೀಸಿ ನೇವರಿಸಿದವು.

ಮಿತಿಮೀರಿದ ದುಃಖ, ನೋವು, ಯಾತನೆ, ವಂಚನೆಯ ಸಂಚುಗಳ ಹೊಡೆತವನ್ನು ತಾಳಲಾರದ ರಾಮಣ್ಣನ, ಒಳ್ಳೆಯ, ರೈತ ಹೃದಯ ಸತ್ತಿತ್ತು. ಆತ ಮರು ಜನ್ಮದಲ್ಲಿ ಹುಚ್ಚನಾಗಿ ಊರೂರು ಅಲೆಯತೊಡಗಿದ.

° ° °

ನಿಂಗಣ್ಣ ಕತೆ ಮುಗಿಸಿದಾಗ, ನಾವಾರೂ ಮಾತನಾಡಲಿಲ್ಲ. ಹೆಚ್ಚುಕಡಿಮೆ ನಾವೆಲ್ಲರೂ ಒಂದೇ ಸ್ಥಿತಿಯಲ್ಲಿದ್ದೆವು ಆಗ. ಸಿನಿಮಾ ನೋಡುವ ಉತ್ಸಾಹ ಕುಗ್ಗಿತ್ತು. ಸಂತೆಗೆ ಹೋಗುತ್ತಿದ್ದ ಹಳ್ಳಿಯ ಹೆಂಗಸರನ್ನು ಕೀಟಲೆ ಮಾಡಲು ಯಾರಿಗೂ ಮನಸ್ಸು ಬರಲಿಲ್ಲ. ಕಾಲು ನಿಧಾನವಾಗಿ ಚಲಿಸಿದ್ದವು....

ನೋಡಬೇಕಾದ ಚಿತ್ರಕ್ಕಿಂತ ಗತಚಿತ್ರವೊಂದು ನಮ್ಮ ಕಣ್ಣೆದುರು ಕಟ್ಟಿತ್ತು....

ಕಿರ್ಲೋಸ್ಕರ್ ಕೆಲಸಗಾರರ ಕಾರ್ಯಕಾರಿ ಸಮಿತಿ ಸಭೆ

(೭ನೇ ಪುಟದಿಂದ)

ದು ದಿನದಿನಕ್ಕೂ ಕಷ್ಟಕರವಾಗಿರುತ್ತದೆ. ಆದುದರಿಂದ ಸರಕಾರದವರು ಕೂಡಲೇ ಆಹಾರ ಧಾನ್ಯಗಳು ಮತ್ತಿತರ ಜನರ ನಿತ್ಯೋಪಯೋಗಿ ವಸ್ತುಗಳ ಧಾರಣೆಗಳು ಹೆಚ್ಚುತ್ತಿರುವುದನ್ನು ತಡೆಗಟ್ಟುವ ಆಜ್ಞೆಯನ್ನು ಹೊರಡಿಸಬೇಕೆಂದೂ, ಹಂಹರದಲ್ಲಿ ಸರ್ಕಾರದ ಆಹಾರ ಧಾನ್ಯಗಳ ಅಗ್ಗದರದ ಅಂಗಡಿಗಳನ್ನು [illegible] ಸರ್ಕಾರವನ್ನು ಒತ್ತಾ[illegible] ವಿಸಿಕೊಳ್ಳುವ ನಿ[illegible] ಯಿತು.

Printers
3810

ಕಮ್ಯೂನಿಸ್ಟ್ ಪಾರ್ಟಿ ಸಭೆಗಳು

(೩ನೇ ಪುಟದಿಂದ)

ಸಭೆ ನಡೆಯಿತು. ಬಿ. ವಿ. ಕಕ್ಕಿಲ್ಲಾಯರು, 'ಇಂದಿನ ರಾಜಕೀಯ ಪರಿಸ್ಥಿತಿ ಮತ್ತು ಕೇರಳ ಸರಕಾರ' ಈ ವಿಷಯದ ಮೇಲೆ ಭಾಷಣಮಾಡಿ, ಕಾಂಗ್ರೆಸ್ಸಿನವರು ಕಳೆದ 11 ವರ್ಷಗಳಿಂದ 13 ಪ್ರಾಂತಗಳಲ್ಲಿ ತಾವು ನಡೆಸುತ್ತಿರುವ ಆಡಳಿತೆಯನ್ನು, ಕಮ್ಯೂನಿಸ್ಟ್ ಪಾರ್ಟಿಯವರು ಕಳೆದ 16 ತಿಂಗಳಲ್ಲಿ ಕೇರಳದಲ್ಲಿ ನಡೆಸುತ್ತಿರುವ ಆಡಳಿತೆಯನ್ನು ತುಲನೆ ಮಾಡಿ, ಕಮ್ಯೂನಿಸ್ಟ್ ಪಾರ್ಟಿ ತಾನು ಜನತೆಗಿತ್ತ ಆಶ್ವಾಸನೆಯಂತೆ ಆಡಳಿತೆ ನಡೆಸುತ್ತಿದ್ದರೆ, ಕಾಂಗ್ರೆಸ್ಸಿನವರು, ತಾತಾ-ಬಿರ್ಲಾನಂತ ಬಂಡವಾಳಶಾಹಿ ಜನರಿಗಂಜಿ, ತಾವು ಜನತೆಗಿತ್ತ ಆಶ್ವಾಸನೆಗಳನ್ನೆಲ್ಲ ಅಲ್ಲಗಳೆದು, ಜನವಿರೋಧಿ ಆಡಳಿತೆ ನಡೆಸುತ್ತಿದೆಂದು ಹೇಳಿದರು.

ಅದೇ ದಿವಸ ರಾತ್ರಿ ಬಿಜಾಪುರದಿಂದ 15 ಮೈಲು ದೂರದಲ್ಲಿರುವ ಸಂಗಾಪುರ ಹಳ್ಳಿಯಲ್ಲಿ ರೈತರ ಸಭೆಯಲ್ಲಿ ಶ್ರೀ ಕಕ್ಕಿಲ್ಲಾಯರು ಭಾಷಣ ಮಾಡುತ್ತ, ರೈತರ ಹಿತವಾಗಬೇಕಾದರೆ ಒಕ್ಕಲುತನದ ಸುಧಾರಣೆಯಾಗಬೇಕೆಂದೂ, ಕಾಂಗ್ರೆಸ್ ಸರಕಾರ ಜಮೀನುದಾರರ ಬೆದರಿಕೆಗೆ ಅಂಜಿ, ಒಕ್ಕಲಿಗರ ಹಿತವಾಗುವ ಕಾನೂನನ್ನು ಮಾಡಲು ಹಿಂಜರಿಯುತ್ತಿದೆಂದೂ, ಕಾರಣ ರೈತರೆಲ್ಲ ಒಗ್ಗಟ್ಟಾಗಿ, ರೈತ ಸಂಘವನ್ನು ಬಲಪಡಿಸಿ, ತಮ್ಮ ಬೇಡಿಕೆಗಳನ್ನು ಪಡೆಯಲು ಸಿದ್ಧರಾಗಬೇಕೆಂದು ಹೇಳಿದರು. ಶ್ರೀ ಬಾಲಸಿಂಗ ಮಾಸ್ತರ ಮತ್ತು ಎನ್. ಕೆ. ಉಪಾಧ್ಯಾಯರು ರೈತರ ಮುಂದಿರುವ ಮಹತ್ವದ ಪ್ರಶ್ನೆಗಳ ಕುರಿತು ಭಾಷಣ ಮಾಡಿದರು.

ಬಾಗಲಕೋಟೆ

ತಾ. ೨೧-೯-೫೮ರಂದು ಬಾಗಲಕೋಟೆಯ, ಶ್ರೀ ಷ. ಬ್ರ. ರುದ್ರಮುನಿ ಶಿವಾಚಾರ್ಯರು, ಇವರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಕಾಂ|| ಕಕ್ಕಿಲ್ಲಾಯರು, "ಕಮ್ಯೂನಿಜಂ" ವಿಷಯದ ಮೇಲೆ, ಕಳೆದ ೧೧೦ ವರ್ಷಗಳ ಕಾಲಾವಧಿಯಲ್ಲಿ ನಡೆದ ಜಾಗತಿಕ ಘಟನೆಗಳು ವ, ಕಮ್ಯೂನಿಸ್ಟ್ ತತ್ವಜ್ಞಾನದ ಪ್ರಗತಿ, ರಷ್ಯ, ಚೀನ, ಪೂರ್ವ ಯೂರೋಪದ ರಾಷ್ಟ್ರಗಳ ಬೆಳವಣಿಗೆ, ಮುಂತಾದುವನ್ನು ವಿವರಿಸಿ ಹೇಳಿದರು.

ಕಾಂ|| ಎನ್. ಕೆ. ಉಪಾಧ್ಯಾಯರು, ಕೇರಳದ ಕಮ್ಯೂನಿಸ್ಟ ಸರಕಾರದ ವಿರುದ್ಧ, ಕಾಂಗ್ರೆಸ್ಸಿಗರು ವ, ಇತರರು, ಮಾಡುತ್ತಿರುವ ಪೊಳ್ಳು ಅಪಪ್ರಚಾರದ ಕುರಿತು, ಕಳೆದ ಕೆಲ ತಿಂಗಳುಗಳ ಆಡಳಿತೆಯಲ್ಲಿ ಕೇರಳದಲ್ಲಾದ ಪ್ರಗತಿ ಕುರಿತು ಭಾಷಣ ಮಾಡಿದರು.

ಹಾಗೂ, ಬಾಗಲಕೋಟೆಯ ಪ್ರಸಿದ್ಧ ವ್ಯಾಪಾರಿಗಳೂ, ಕರ್ನಾಟಕ ವಣಿಕ ಸಂಘದ ಸಂಸ್ಥಾಪಕರಲ್ಲೊಬ್ಬರೂ, ಕರ್ನಾಟಕಗಿನ ಕ್ರಮೋನ್ನತ್ಯಾಗಿ ದುಡಿದವರೂ ಆದ ... ಕೆಂದು ಕಮ್ಯೂನಿ... ರಿಗಯ್ಯನವರು ನಿಧನ ಪಡಿಸುತ್ತದೆ: ... ಷ ಸೂಚಿಸುವ ಠರಾ... ಹೆಚ್ಚು... ಯಿತು.

ಬೆಂಗಳೂರು

ಕೇರಳದ ಸರಕಾರಕ್ಕೆ ಬೆಂಬಲ ನೀಡಲು, ಏರುತ್ತಿರುವ ಆಹಾರದ ಬೆಲೆಯನ್ನು ತಡೆಗಟ್ಟಲು ಮೈಸೂರು ಸರಕಾರವು ಸರ್ವಪಕ್ಷ ಸಮ್ಮೇಳನ ಕರೆಯಬೇಕೆಂದು ಒತ್ತಾಯಪಡಿಸಲು, ಜನತಾ ಚೀಣದ ತೀರಪ್ರದೇಶದಲ್ಲಿ ಅಮೇರಿಕದ ಆಕ್ರಮಣಕಾರೀ ಕೃತ್ಯವನ್ನು ಖಂಡಿಸಲು ಬಹಿರಂಗ ಸಭೆ ನಡೆಸಬೇಕೆಂದು ಕಮ್ಯೂನಿಸ್ಟ್ ಪಾರ್ಟಿಯ ಜಿಲ್ಲಾ ಸಮಿತಿಯು ತನ್ನ ಶಾಖೆಗಳಿಗೆ ಕರೆಯಿತ್ತಿತ್ತು. ಆ ಕರೆಯ ಮೇರೆಗೆ ನಗರದ ವಿವಿಧ ಭಾಗಗಳಲ್ಲಿ ಸಭೆ ನಡೆಯಿತು.

ನಗರದ ದಂಡು ಪ್ರದೇಶದಲ್ಲಿ

ನಗರದ ದಂಡು ಪ್ರದೇಶದ ಶಾಖೆಯ ಆಶ್ರಯದಲ್ಲಿ ರಸೆಲ್ ಮಾರ್ಕೆಟ್ ಪ್ರದೇಶದಲ್ಲಿ ಸೆಪ್ಟಂಬರ್ 27ರಂದು ಸಂಜೆ ಬಹಿರಂಗ ಸಭೆ ನಡೆಯಿತು.

ಜಿಲ್ಲಾ ಸಮಿತಿಯ ಸದಸ್ಯರೂ ಕಾರ್ಪೊರೇಷನ್ ಕೌನ್ಸಿಲರೂ ಆದ ಶ್ರೀ ಡಿ. ಎಸ್. ಶ್ರೀರಾಮುಲುರವರು ಸಭಾಧ್ಯಕ್ಷತೆ ವಹಿಸಿದ್ದರು.

ಶ್ರೀಗಳಾದ ಕೆ. ವಜ್ರವೇಲು, ಎಸ್. ಸೂರ್ಯನಾರಾಯಣ ರಾವ್ ಮತ್ತು ಅಹಮದುಲ್ಲಾ ಖಾನ್ ಇವರುಗಳು ಸಭೆಯಲ್ಲಿ ಭಾಷಣ ಮಾಡಿದರು.

ಕೇರಳದಲ್ಲಿನ ಕಮ್ಯೂನಿಸ್ಟ್ ಸರಕಾರಕ್ಕೆ ಬೆಂಬಲವೀಯುವ, ಆಹಾರ ಧಾನ್ಯಗಳ ಬೆಲೆಯೇರಿಕೆಯನ್ನು ತಡೆಯಲು ಸರಕಾರವು ಕೂಡಲೇ ಸರ್ವಪಕ್ಷ ಸಮ್ಮೇಳನ ಕರೆಯಬೇಕೆನ್ನುವ ಚೀಣದ ತೀರಪ್ರದೇಶದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಯ ಆಕ್ರಮಣಕಾರೀ ಕೃತ್ಯವನ್ನು ಖಂಡಿಸುವ, ಅಲ್ಜೀರಿಯದ ಸ್ವಾತಂತ್ರ್ಯ ತಾತ್ಕಾಲಿಕ ಸರಕಾರಕ್ಕೆ ಬೆಂಬಲವೀಯುವ, ಚಂದ್ರ ಮತ್ತು ಕೃಷ್ಣ ವೀವಿಂಗ್ ಮಿಲ್ಸ್‌ನ ಲಾಕೌಟನ್ನು ಕೂಡಲೇ ತೆಗೆಯಬೇಕೆಂದು ಸರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸುವ ನಿರ್ಣಯಗಳನ್ನು ಸಭೆಯಲ್ಲಿ ಅನುಮೋದಿಸಲಾಯಿತು.

ಶೇಷಾದ್ರಿಪುರದಲ್ಲಿ

ಮಲ್ಲೇಶ್ವರಂ ಶಾಖಾ ಸಮಿತಿಯ ಆಶ್ರಯದಲ್ಲಿ ತಾ. 28—9—58ರಂದು ಸಂಜೆ ಶೇಷಾದ್ರಿಪುರಂ ಪಾರ್ಕಿನ ಬಳಿ ಬಹಿರಂಗ ಸಭೆ ನಡೆಯಿತು.

ಶ್ರೀ ಬಿ. ವಿ. ಕಕ್ಕಿಲ್ಲಾಯರವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು.

ಶಾಸನ ಸಭಾ ಸದಸ್ಯರಾದ ಶ್ರೀ ಎಂ. ಸಿ. ನರಸಿಂಹನ್ ಮತ್ತು ಡಾ| ಕೆ. ಟಿ. ಬೆಹನನ್‌ರವರು ಸಭೆಯನ್ನುದ್ದೇಶಿಸಿ, ಆಹಾರ ಧಾನ್ಯಗಳ ಬೆಲೆ ಏರಿಕೆ, ಕೇರಳದ ನಿಜಸ್ಥಿತಿ ಮತ್ತು ಫಾರ್ಮೋಸಾ ಹಾಗೂ ಅಲ್ಜೀರಿಯದ ಪರಿಸ್ಥಿತಿಯನ್ನು ಕುರಿತು ಭಾಷಣ ಮಾಡಿದರು.

ಸಾಹಿತ್ಯ ಪರಿಷತ್ತಿನಲ್ಲಿ

ನಗರ ಶಾಖಾ ಸಮಿತಿ (೧)ಯ ಆಶ್ರಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಸೆಪ್ಟಂಬರ್ 30ರಂದು ಸಂಜೆ ಬಹಿರಂಗ ಸಭೆ ನಡೆಯಿತು.

ಬೆಂಗಳೂರು ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಎಸ್. ಸೂರ್ಯನಾರಾಯಣ ರಾವ್ ಇವರು ಸಭಾಧ್ಯಕ್ಷತೆ ವಹಿಸಿದ್ದರು.

ಶಾಸನ ಸಭಾ ಸದಸ್ಯರಾದ ಎಂ. ಸಿ. ನರಸಿಂಹನ್ ಮತ್ತು ಡಾ|| ಕೆ. ಟಿ. ಬೆಹನಾನ್‌ರವರು ಸಭೆಯನ್ನುದ್ದೇಶಿಸಿ, ಕೇರಳ ಪರಿಸ್ಥಿತಿಯ ಬಗ್ಗೆ, ಆಹಾರ ಧಾನ್ಯಗಳ ಬೆಲೆ ಏರಿಕೆಯ ಬಗ್ಗೆ ಮಾತನಾಡಿದರು.

ಕೃಷ್ಣಾ ವೀವಿಂಗ್ ಮಿಲ್ಸ್ ಮತ್ತು ಚಂದ್ರಾ ಮಿಲ್ಸ್ ಲಾಕ್ ಔಟನ್ನು ಕೂಡಲೇ ತೆಗೆಯಬೇಕೆಂದು ಒತ್ತಾಯಪಡಿಸುವ, ಅಲ್ಜೀರಿಯದ ಸ್ವಾತಂತ್ರ್ಯ ತಾತ್ಕಾಲಿಕ ಸರಕಾರಕ್ಕೆ ಬೆಂಬಲ ನೀಡುವ ನಿರ್ಣಯಗಳು ಸಭೆಯಲ್ಲಿ ಅನುಮೋದಿಸಲಾಯಿತು.

19—10—58ನೇ ತಾರೀಕು ಬೆಂಗಳೂರು ನಗರದಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಭಾರೀ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದ್ದೂ, ಅದರಲ್ಲಿ ಕೇರಳ ಪ್ರಾಂತ ಸಮಿತಿಯ ಕಾರ್ಯದರ್ಶಿಗಳಾಸ ಕಾಂ|| ಎಂ. ಎನ್. ಗೋವಿಂದನ್ ನಾಯರ್‌ರವರು ಅಥವಾ ಕಾಂ|| ಪಿ. ಸಿ. ಜೋಶಿಯವರು ಭಾಗವಹಿಸುವ ನಿರೀಕ್ಷೆ ಇದೆ. ನಗರದ ಜನತೆಯು ಸಭೆಗೆ ಎಲ್ಲಾ ರೀತಿಯ ಸಹಕಾರ ನೀಡಬೇಕೆಂದು ಕೇಳಿಕೊಳ್ಳಲಾಯಿತು.

——

ದೊಡ್ಡಬಳ್ಳಾಪುರದಲ್ಲಿ

ದೇವದಾಸಿ ನಾಟಕ

ಕನ್ನಡ ನಾಟಕ ಕಲಾವಿದರಲ್ಲಿ ಪ್ರಖ್ಯಾತರಾದ ದಿವಂಗತ ಹಿರಣ್ಣಯ್ಯನವರ ಕಲಾಕೃತಿ "ದೇವದಾಸಿ" ಹಾಸ್ಯರಸಭರಿತವಾಗಿರುವುದಷ್ಟೇ ಅಲ್ಲ. ಸಮಾಜದ ಅಭ್ಯುದಯದತ್ತ ಜನರ ಮನ ಸೆಳೆದಿದೆ. ಇದರ ನಿರ್ಮಾಪಕರು, ಸ್ತ್ರೀಯೊಬ್ಬಳು ಸಮಾಜದ ಲೋಪದೋಷಗಳಿಂದ ವೇಶ್ಯಾ ವೃತ್ತಿಯನ್ನು ಅವಲಂಬಿಸುವಂತಾದರೂ, ಭಾರತ ಸ್ತ್ರೀಯರ ನೈಜ ಸ್ವರೂಪವೇನೆಂಬುದನ್ನ ಎತ್ತಿತೋರಿಸಿದ್ದಾರೆ.

ಶ್ರೀಯುತರು ಇದನ್ನ ರಚಿಸಿ, ಸ್ವತಃ ಅಭಿನಯಿಸಿ ಧನ್ಯರಾದರಷ್ಟೇ ಅಲ್ಲ, ಶಾಶ್ವತವಾಗಿ ಜನತೆಯಲ್ಲಿ ನವ ಚೈತನ್ಯ ಹುಟ್ಟುವಂತಾಗುವಂತೆ ರಂಗಮಂಟಪದ ಮೇಲೆ ಅಭಿನಯಿಸುವ ನೈಪುಣ್ಯತೆ ಪಡೆದಿರುವ "ಕಲಾ ಮೂರ್ತಿ" ಮಾಸ್ಟರ್ ಹಿರಣ್ಣಯ್ಯನವರಿಗೆ ಜನ್ಮ ಕೊಟ್ಟು ಮಹೋಪಕಾರ ಮಾಡಿದ್ದಾರೆ. ಹಾಸ್ಯದಲ್ಲಿ ಗಾಂಭೀರ್ಯ, ಅಭಿನಯದಲ್ಲಿ ಸಹಜ ಸ್ಫೂರ್ತಿ ತುಂಬಿವೆ. ಎಲ್ಲಾ ಕಡೆಗಳಲ್ಲೂ ಕಲಾಭಿಮಾನಿಗಳಿಂದ ಮೆಚ್ಚುಗೆ ಪಡೆದಿರುವ ಇವರ ಸರ್ವಶ್ರೇಷ್ಠ ಸಾಮಾಜಿಕ ನಾಟಕ "ಪಂಗನಾಮ" ಮತ್ತು ಐತಿಹಾಸಿಕ ನಾಟಕ "ಎಚ್ಚಮ ನಾಯಕ" ಸದ್ಯದಲ್ಲೇ ಪ್ರದರ್ಶಿಸುವರಿದ್ದಾರೆ. ಕಷ್ಟ ಕಾರ್ಪಣ್ಯಗಳನ್ನ ಎದುರಿಸಿಕೊಂಡು, ನಾಟಕ ಕಲೆಯನ್ನ ಉಳಿಸಿ, ಬೆಳೆಸಿಕೊಂಡುಬರುವ ಸಾಹಸ ಮಾಡಿರುವ, ಈ ದೇಶಾಭಿಮಾನಿಗಳಿಗೆ ಮಹಾಜನರು ಉತ್ತೇಜನ ಕೊಡಬೇಕಾಗಿ ಕೋರುತ್ತೇನೆ.

ಎಚ್. ಮುಗಃವಾಳಪ್ಪ,
ದೊಡ್ಡಬಳ್ಳಾಪುರ.

ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಹೋರಾಟಕ್ಕೆ ದ. ಕ. ಜಿಲ್ಲೆಯಿಂದ ಸಹಾಯ

ಸಪ್ಟೆಂಬರ ತಿಂಗಳು ತಾ. ೩ರಿಂದ ಮುಷ್ಕರ ನಡೆಸುತ್ತಿರುವ ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಹೋರಾಟಕ್ಕೆ ದ. ಕ. ಜಿಲ್ಲೆಯ ಹಂಚು, ಬೀಡಿ, ಪ್ರೆಸ್, ಮೋಟಾರು, ನೇಯ್ಗೆ, ಕಾಫಿ ಕ್ಯೂರಿಂಗ್, ಮುನಿಸಿಪಲ್ ಇತ್ಯಾದಿ ಮಜೂರ ಸಂಘಗಳಿಂದಲೂ, ಎಸ್. ಕೆ. ಟಿ. ಯು. ಸಿ.ಯ ಫಂಡಿನಿಂದಲೂ ಒಟ್ಟುಮಾಡಿರುವ ರೂ. 50 ನ್ನು ಸಹಾಯ ಕಳುಹಿಸಿಕೊಡಲಾಗಿದೆ.

ಹಣ್ಣಿನಂಗಡಿ ಮಾಲಿಕರ ಹರತಾಳ !

ಮಾರಾಟ ಕರದ ವಿರುದ್ಧ ಬೆಂಗಳೂರು ನಗರದ ಹಣ್ಣಿನ ಅಂಗಡಿಗಳವರು ಅಕ್ಟೋಬರ್ ೧ರಿಂದ ಹರತಾಳವನ್ನಾರಂಭಿಸಿದ್ದಾರೆ. ಮಾರ್ಕೆಟ್ ಪ್ರದೇಶದಲ್ಲಿರುವ ಎಲ್ಲ ಹಣ್ಣಿನ ಅಂಗಡಿಗಳೂ ಸಹ ಸಂಪೂರ್ಣವಾಗಿ ಮುಚ್ಚಲಾಗಿದೆ.

ಸರ್ಕಾರವು ಹಣ್ಣಿನ ಅಂಗಡಿಗಳ ಮೇಲೂ ಸಹ ಟರ್ನೋವರ್ ಟ್ಯಾಕ್ಸ್ ವಿಧಿಸಿರುವುದನ್ನು ತೆಗೆದುಹಾಕಬೇಕೆಂದು ಮಾಲಿಕರ ಸಂಘದವರು ಇತ್ತೀಚಿರುವ ಮನವಿ ಪತ್ರದಲ್ಲಿ ಸೂಚಿಸಿದ್ದಾರೆ. ಸರಕಾರದ ಈ ತೆರಿಗೆಯಿಂದಾಗಿ ಸಣ್ಣಪುಟ್ಟ ಅಂಗಡಿಗಳವರಿಗೆ ಬಹಳ ತೊಂದರೆ ಆಗುವುದೆಂದೂ, ಅಲ್ಲದೆ ಹಣ್ಣಿನ ವ್ಯಾಪಾರವು ಇತರೇ ವ್ಯಾಪಾರಗಳಂತೆ ಸದಾಕಾಲವೂ ಇರುವುದಲ್ಲವೆಂದೂ ಕಾಲಗಳಲ್ಲಿ ಮಾತ್ರ ಇರುವುದೆಂದೂ ತಿಳಿಸಿದ್ದಾರೆ.

ಹರತಾಳವು ಸಂಪೂರ್ಣವಾಗಿ ಯಶಸ್ವಿಯಾಗಿ ಶಾಂತಿಯುತವಾಗಿ ನಡೆಯುತ್ತದೆ.

ಇ. ಎಂ. ಎಸ್.ರವರ ಘೋಷಣೆ

(ಮೊದಲನೇ ಪುಟದಿಂದ)

ಡಿಸಿದ್ದ ಸತ್ಕಾರ ಕೂಟದಲ್ಲಿ ಇ.ಎಂ.ಎಸ್. ಭಾಗವಹಿಸಿದರು.

ತಾ. 25ರಂದು ಇ.ಎಂ.ಎಸ್. ರವರು ಬೋಳಾರದಲ್ಲಿ ಹಂಚಿನ ಕೆಲಸಗಾರರು ಕಟ್ಟುತ್ತಿರುವ ಸ್ವಂತ ಸಂಘದ ಕಟ್ಟಡವನ್ನು ಸಂದರ್ಶಿಸಿದರು. ಅಲ್ಲಿ ಕಾರ್ಮಿಕರು ಕಿಕ್ಕಿರಿದು ನೆರೆದು ಅವರಿಗೆ ಸ್ವಾಗತ ನೀಡಿದರು. ಅನಂತರ ಕೇರಳ ಮುಸ್ಲಿಂ ಜಮಾಯತ್‌ನ ಸ್ವಾಗತ ಸ್ವೀಕರಿಸಿ, ಎಸ್.ಕೆ.ಟಿ.ಯು.ಸಿ., ಜಿಲ್ಲಾ ರೈತ ಸಂಘ, ಗೋಡಂಬಿ ಮತ್ತು ಮೋಟಾರು ಕೆಲಸಗಾರರ ಸಂಘಗಳ ಕಚೇರಿಗಳಿಗೆ ಭೇಟಿಯಿತ್ತರು.

ಅನಂತರ ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಕಚೇರಿಯಲ್ಲಿ ಪತ್ರಿಕಾ ಪರಿಷತ್ತಿನಲ್ಲಿ ಭಾಗವಹಿಸಿ, ಅನೇಕ ಪ್ರಶ್ನೆಗಳನ್ನು ಉತ್ತರಿಸಿದರು.

ಮತ್ತೆ ಕಮ್ಯೂನಿಸ್ಟ್ ಪಾರ್ಟಿಯವರು ಏರ್ಪಡಿಸಿದ್ದ ಭೋಜನ ಕೂಟದಲ್ಲಿ ಭಾಗವಹಿಸಿ 2ಘಂಟೆಗೆ ವಿಮಾನದಲ್ಲಿ ಮುಂಬಯಿ ಮಾರ್ಗವಾಗಿ ದಿಹಲಿಗೆ ತೆರಳಿದರು.

REG. No. M 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore—2 phone 3810